## 2019 ಕ.ತೀ.ವ 615

### ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಜಯಂತ್ ಪಟೇಲ್
### ಮತ್ತು
### ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ

### ಶ್ರೀಮತಿ ಲಕ್ಷ್ಮೀನರಸಮ್ಮ ಮತ್ತು ಮತ್ತೊಬ್ಬರು –ವಿರುದ್ಧ– ಶ್ರೀ ರಾಮಣ್ಣ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ, 1908, 41ನೇ ಕ್ರಮಾದೇಶದ 11(4) ನೇ ನಿಯಮ

ಪ್ರಥಮ ಮೇಲ್ಮನವಿಯು ವಾದಿ – ಪ್ರತಿವಾದಿಯರ ಬಹುಮೂಲ್ಯ ಹಕ್ಕಾಗಿದ್ದು, ಯಾವುದೇ ಕಾನೂನಿನ ಅಡಿ ಅದನ್ನು ಮಿತಿಗೊಳಿಸಿದ ಸಂದರ್ಭವನ್ನು ಹೊರತುಪಡಿಸಿ, ಪ್ರಥಮ ಮೇಲ್ಮನವಿ ನ್ಯಾಯಾಲಯವು ಪ್ರಕರಣವನ್ನು ಸಂಪೂರ್ಣವಾಗಿ ಪರಿಗಣಿಸಬೇಕಾಗುತ್ತದೆ. ವಾದಿ–ಪ್ರತಿವಾದಿಯರ ಪ್ರಕರಣದ ಕುರಿತು ವಿವಾದಾಂಶ, ಸಾಕ್ಷಿ ಮತ್ತು ಪಕ್ಷಕಾರರ ವಾದ–ವಿವಾದಗಳನ್ನು ವಸ್ತುಸ್ಥಿತಿ ಮತ್ತು ಕಾನೂನಿನ ಅನ್ವಯ ಸಂಪೂರ್ಣವಾಗಿ ಮರು ಪರಿಗಣಿಸಬೇಕಾಗುತ್ತದೆ.

ಆದರೆ ಉಚ್ಚ ನ್ಯಾಯಾಲಯವು ಪ್ರಥಮ ಹಂತದಲ್ಲಿಯೇ ಮೇಲ್ಮನವಿಯನ್ನು ಯಾವುದೇ ವ್ಯಾಜ್ಯ ಕಾರಣಗಳಿಲ್ಲದ ಅಂಶಕ್ಕೆ ತಿರಸ್ಕರಿಸಬಹುದಾಗಿದೆ. ಅಂತಹ ತಿರಸ್ಕರಣೆಗೆ ಕ್ರಮಾದೇಶ 41ನೇ ನಿಯಮ 11ರಡಿ ಕಾರಣಗಳನ್ನು ನೀಡಬೇಕಾಗುತ್ತದೆ. ಪ್ರಸ್ತುತ ಪ್ರಕರಣದಲ್ಲಿ ದಾಖಲಿಸಿದ ಸಾಕ್ಷಿ ಪುರಾವೆಗಳು ತ್ಯಾಗಪತ್ರವನ್ನು ಕೇವಲ ವಾದಿಗಳು ಜಾರಿಗೊಳಿಸಿದ ಅಂಶ ಮಾತ್ರವಲ್ಲದೆ ಅದನ್ನು ಅವರಿಗೆ ವಿವರಿಸಿ ಅವರು ಅರ್ಥೈಸಿಕೊಂಡ ಬಗ್ಗೆ ಅಧಿಕಾರಯುತವಾಗಿ ಮತ್ತು ನಿರ್ಣಯಾತ್ಮಕವಾಗಿ ನಿರ್ಧರಿಸುತ್ತವೆ. ಆದ್ದರಿಂದ

*ಆರ್.ಎಫ್.ಎ. ಸಂಖ್ಯೆ: 502/2017, ದಿನಾಂಕ 21ನೇ ಜುಲೈ, 2017.

ಕೆಳ ನ್ಯಾಯಾಲಯವು ಸಾಕ್ಷಿ ಪುರಾವೆಗಳನ್ನು ಪರಿಗಣಿಸುವ ಸಂದರ್ಭದಲ್ಲಿ ಯಾವುದೇ ತಪ್ಪನ್ನು ಎಸಗಿರುವುದಿಲ್ಲ. ಆದ್ದರಿಂದ ಪ್ರಸ್ತುತ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆ.

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. (2016) 13 ಎಸ್‌ಸಿಸಿ 124; ಭಾರತ ಒಕ್ಕೂಟ –ವಿರುದ್ಧ– ಕೆ.ವಿ. ಲಕ್ಷ್ಮಣ್ ಮತ್ತು ಇತರರು* | *(ಉಲ್ಲೇ) 9* |
| *2. ಎಐಆರ್ 1963 ಎಸ್‌ಸಿ 1203 ಎಮ್‌ಎಸ್‌ಟಿ ಖರಬೂಜ ಕ್ಯೂರ್ –ವಿರುದ್ಧ– ಜಂಗ್‌ಬಹದ್ದೂರ್ ರೈ ಮತ್ತು ಇತರರು* | *(ಉಲ್ಲೇ) 9* |
| *3. ಎಐಆರ್ 1993 ಎಸ್‌ಸಿ 956 ಎಂಎಸ್‌ಟಿ ಸೇತಾನಿ –ವಿರುದ್ಧ– ಭಾನಾ* | *(ಉಲ್ಲೇ) 9* |
| *4. ಎಐಆರ್ 2003 ಎಸ್‌ಸಿ 4351 ಕೃಷ್ಣ ಮೋಹನ್ ಕುಲ್ ಅಲಿಯಾಸ್ ನಾನಿ ಚರಣ್ ಕುಲ್ ಮತ್ತು ಮತ್ತೊಬ್ಬರು –ವಿರುದ್ಧ– ಪ್ರತಿಮಾ ಮೈಟಿ ಮತ್ತು ಇತರರು* | *(ಉಲ್ಲೇ) 9* |
| *5. ಎಐಆರ್ 1988 ಕೇರಳ 133 ಎ. ವೆಂಕಪ್ಪ ಭಟ್ಟ ಮತ್ತು ಇತರರು –ವಿರುದ್ಧ– ಗಂಗಮ್ಮ ಮತ್ತು ಇತರರು* | *(ಉಲ್ಲೇ) 9* |
| *6. ಐಎಲ್‌ಆರ್ 2015 ಕೆಎಆರ್ 2809 ಶ್ರೀ ಟಿ.ಎಸ್. ಚನ್ನೇಗೌಡ –ವಿರುದ್ಧ– ಶ್ರೀ ಎಚ್. ತೋಪಯ್ಯ ಮತ್ತು ಮತ್ತೊಬ್ಬರು* | *(ಉಲ್ಲೇ) 16* |
| *7. (2011)6 ಎಸ್‌ಸಿಸಿ 456 ಉತ್ತರ ಪ್ರದೇಶ ಅವಾಸ್ ಈವಮ್ ವಿಕಾಸ್ ಪರಿಷದ್ –ವಿರುದ್ಧ– ಶಿಯೋ ನರೈನ್ ಕುಶವ್ಹ ಮತ್ತು ಇತರರು* | *(ಉಲ್ಲೇ) 17* |

ಅರ್ಜಿದಾರರ ಪರ: ಶ್ರೀ ಸತೀಶ್ ಕೆ.ಎನ್. ವಕೀಲರ ಪರವಾಗಿ
ಶ್ರೀ ಕೆ. ಸುಬ್ಬಾರಾವ್, ಹಿರಿಯ ವಕೀಲರು.

**ಆಜ್ಞೆ**

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತ:**

ಈ ಅಪೀಲನ್ನು ಮೂಲ ದಾವೆ ಸಂಖ್ಯೆ 10/2014ರಲ್ಲಿ ತುಮಕೂರಿನ IIನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿಯವರು ಹೊರಡಿಸಿದ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಹೂಡಲಾಗಿದೆ.

2. ಅನುಕೂಲತೆಯು ಕಾರಣಕ್ಕಾಗಿ ಪಕ್ಷಕಾರರನ್ನು ಅಧಿವಿಚಾರಣಾ ನ್ಯಾಯಾಲಯದಲ್ಲಿ ಅವರ ಸ್ಥಾನಮಾನದ ಪ್ರಕಾರ ಉಲ್ಲೇಖಿಸಲಾಗಿದೆ.

3. ಸಂಗತಿಗಳು ಸಂಕ್ಷಿಪ್ತವಾಗಿ ಹೀಗಿವೆ:

ವಾದಿಗಳು/ಅಪೀಲುದಾರರು, ಪ್ರತಿವಾದಿಗಳ ವಿರುದ್ಧ ಮೂಲ ದಾವೆ ಸಂಖ್ಯೆ:10/2014ನ್ನು ಹೂಡಿದ್ದಾರೆ. ಪಾಲಿಗಾಗಿ ಹಾಗೂ ಪ್ರತ್ಯೇಕ ಸ್ವಾಧೀನತೆಗಾಗಿ ಹೂಡಿದ್ದಾರೆ. ದಾವೆಯ ವಸ್ತುವಿಷಯವನ್ನು ಹೊಂದಿರುವ ಸ್ವತ್ತುಗಳು:

> *i) ಬೆಳಗುಂಬ ಗ್ರಾಮ, ಕಸಬಾ ಹೋಬಳಿ, ತುಮಕೂರು ತಾಲೂಕಿನಲ್ಲಿರುವ 1.87 ಪೈಸೆಗೆ ನಿರ್ಧರಿಸಲಾದ 11 ಗುಂಟೆಗಳ ಕರಾಬನ್ನು ಒಳಗೊಂಡ 2 ಎಕರೆ 14 ಗುಂಟಾ ಅಳತೆಯಿರುವ ಸರ್ವೆ ನಂ: 94/1 ರ ಭೂಮಿ.*

*ii) ತುಮಕೂರು ತಾಲೂಕಿನ ಕಸಬಾ ಹೋಬಳಿ ಬೆಳಗುಂಬ ಗ್ರಾಮದಲ್ಲಿರುವ 2 ಎಕರೆ 6 ಗುಂಟೆಗಳ ಅಳತೆಯಿರುವ ಸಂಖ್ಯೆ.5/2ನ್ನು ಹೊಂದಿರುವ ಜಮೀನಿನ ಪೈಕಿ 4.68ಕ್ಕೆ ನಿರ್ಧರಿಸಲಾದ 0.28.05 ಗುಂಟೆಗಳು.*

4. ವಾದಿ ಹೇಳಿಕೆಗಳೇನೆಂದರೆ, 1 ರಿಂದ 4ರ ವರೆಗಿನ ವಾದಿಗಳು ಹಾಗೂ ಪ್ರತಿವಾದಿಗಳು ರಾಮಯ್ಯ ಹಾಗೂ ಲಕ್ಷ್ಮಮ್ಮನವರ ಮಕ್ಕಳಾಗಿದ್ದಾರೆ. ದಾವಾ ಅನುಸೂಚಿ ಸ್ವತ್ತಿನ ಬಾಬ್ತು ಸಂ.1ನ್ನು ದಿನಾಂಕ: 26.9.1979ರಂದು ಕ್ರಯಪತ್ರವನ್ನು ನೋಂದಣಿ ಮಾಡುವ ಮೂಲಕ ಲಕ್ಷ್ಮಮ್ಮಳು ಖರೀದಿಸಿದ್ದಳು ಎಂಬುದಾಗಿದೆ. ದಾವಾ ಸ್ವತ್ತಿನ 2ನೇ ಸಂಖ್ಯೆಯ ಬಾಬ್ತು 1 ರಿಂದ 4ರ ವರೆಗಿನ ವಾದಿಗಳು ಹಾಗೂ ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಯಾಗಿದೆ. ಅವರು ದಾವಾ ಅನುಸೂಚಿ ಸ್ವತ್ತಿನ ಜಂಟಿ ಸ್ವಾಧೀನತೆ ಹೊಂದಿದ್ದು, ಅನುಭವದಲ್ಲಿದ್ದಾರೆ. ವಾದಿಗಳು, ಮುಗ್ಧರು, ಅಜ್ಞಾನಿಗಳು ಅನಕ್ಷರಸ್ಥ ವ್ಯಕ್ತಿಗಳೂ ಆಗಿದ್ದು, ಪ್ರಪಂಚ ಜ್ಞಾನವನ್ನು ಹೊಂದಿರುವುದಿಲ್ಲ, 1 ರಿಂದ 4ರ ವರೆಗಿನ ಪ್ರತಿವಾದಿಗಳು ಇದರ ಅನುಚಿತ ಅನುಕೂಲತೆಯನ್ನು ಬಳಸಿಕೊಂಡು, ದಾವಾ ಸ್ವತ್ತುಗಳನ್ನು ಸಮಹಂಚಿಕೆಯಾಗಿ ವಿಭಾಗಿಸುವ ನೆಪದಲ್ಲಿ ದಿನಾಂಕ: 28.2.2013ರಂದು ವಾದಿಗಳಿಂದ ನೋಂದಾಯಿತ ತ್ಯಾಗಪತ್ರವನ್ನು ಪಡೆದುಕೊಳ್ಳುವಲ್ಲಿ ಮೋಸ ಮಾಡಿರುತ್ತಾರೆ. 1 ರಿಂದ 4ರ ವರೆಗಿನ ಪ್ರತಿವಾದಿಗಳ ಹೆಸರಲ್ಲಿ ತ್ಯಾಗಪತ್ರವನ್ನು ನೀಡುವ ಯಾವುದೇ ಉದ್ದೇಶ ವಾದಿಗಳಿಗಿರಲಿಲ್ಲ, ಇದನ್ನು ಮೋಸದಿಂದ, ಒತ್ತಾಯದಿಂದ ಮತ್ತು ವಾದಿಗಳ ಮೇಲೆ ಅನುಚಿತ ಪ್ರಭಾವ ಬಳಸಿದುದರ ಪರಿಣಾಮದಿಂದಾಗಿದೆ. 1 ರಿಂದ 4ರ ವರೆಗಿನ ಪ್ರತಿವಾದಿಗಳು ವಾದಿಗಳ ಹಕ್ಕುಗಳನ್ನು ಕಸಿದುಕೊಳ್ಳುವ ಸಲುವಾಗಿ ದಿನಾಂಕ: 14.11.2013ರಂದು 5ನೇ ಪ್ರತಿವಾದಿಯ ಹೆಸರಿನಲ್ಲಿ ಮಾರಾಟ ಒಪ್ಪಂದಪತ್ರವನ್ನು ಮಾಡಿದ್ದರು. 5ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಪತ್ರವನ್ನು ನೋಂದಣಿ ಮಾಡುವ ಪ್ರಯತ್ನ ಮಾಡಿ ಪ್ರತಿವಾದಿಗಳು ಒಬ್ಬರಿಗೊಬ್ಬರು ಒಳಸಂಚು ನಡೆಸಿದ್ದಾರೆ. ಸದರಿ ಸಂಗತಿಗಳು ವಾದಿಗಳ ಗಮನಕ್ಕೆ ಬಂದಿದ್ದರಿಂದ, ಪಕ್ಷಕಾರರ ನಡುವಿನ ವಿವಾದವನ್ನು ಪರಿಹರಿಸಲು ಪಂಚಾಯತಿಯನ್ನು ನಡೆಸಲಾಗಿದ್ದು, ಇದು ಮೂರ್ತಗೊಂಡಿರಲಿಲ್ಲ. ಆಪಾದಿಸಲಾದ

ತ್ಯಾಗಪತ್ರದಲ್ಲಿ ಅವರು ಸ್ವೀಕರಿಸಿರುವುದರಿಂದ ಮೊತ್ತ ಇರುವುದಿಲ್ಲವೆಂಬುದು ವಾದಿಗಳ ವಾದವಾಗಿತ್ತು.

5. 1ರಿಂದ 4ರ ವರೆಗಿನ ಪ್ರತಿವಾದಿಗಳು ನ್ಯಾಯಾಲಯದ ಮುಂದೆ ಹಾಜರಾಗಿ ಅವರ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದಾರೆ. 5ನೇ ಪ್ರತಿವಾದಿಯು ಗೈರುಹಾಜರಾಗಿ ಏಕಪಕ್ಷೀಯವಾಗಿ ಉಳಿದಿದ್ದಾನೆ. ವಾದಿಗಳು ಮತ್ತು 1 ರಿಂದ 4ರ ವರೆಗಿನ ಪ್ರತಿವಾದಿಗಳ ನಡುವಿನ ಸಂಬಂಧವನ್ನು ಮತ್ತು ವಾದಿಗಳ ಮತ್ತು 1 ರಿಂದ 4ರ ವರೆಗಿನ ಪ್ರತಿವಾದಿಗಳ ಬಾಬ್ತು ಸಂಖ್ಯೆ:1 ಮತ್ತು ಬಾಬ್ತು ಸಂಖ್ಯೆ:2ರ ಸ್ವತ್ತಿನ ಬಾಬ್ತಿನ ದಾವಾ ಸ್ವತ್ತುಗಳ ಆರ್ಜನೆಯನ್ನು ಪೂರ್ವಿಕರಿಂದ ಬಂದುದೆಂದು ಪ್ರತಿವಾದಿಗಳು ಒಪ್ಪಿಕೊಂಡಿದ್ದಾರೆ. ದಿನಾಂಕ: 28.2.2013ರಂದು, 1 ರಿಂದ 4ರ ವರೆಗಿನ ಪ್ರತಿವಾದಿಗಳಿಂದ 6,00,000ರೂ.ಗಳ ಮೊತ್ತವನ್ನು ಸ್ವೀಕರಿಸುವ ಮೂಲಕ ತಮ್ಮ ಇಷ್ಟಾನುಸಾರ ಮತ್ತು ಉದ್ದೇಶದಿಂದ ತ್ಯಾಗಪತ್ರವನ್ನು ಮಾಡಿರುವ ವಾದಿಗಳು ದಾವಾ ಸ್ವತ್ತುಗಳ ಮೇಲಿನ ತಮ್ಮ ಹಕ್ಕು, ಅಧಿಕಾರ ಮತ್ತು ಹಿತಾಸಕ್ತಿಯನ್ನು ಕಳೆದುಕೊಂಡಿದ್ದಾರೆಂದು ವಾದಿಸಿದ್ದಾರೆ. 1 ರಿಂದ 4ರ ವರೆಗಿನ ಪ್ರತಿವಾದಿಗಳು ತಮ್ಮ ಕಾನೂನು ಅಗತ್ಯಗಳಿಗಾಗಿ ಮತ್ತು ಕೈಸಾಲಗಳನ್ನು ಮರುಸಂದಾಯ ಮಾಡುವುದಕ್ಕಾಗಿ ದಿನಾಂಕ: 14.11.2013ರಂದು ಮಾರಾಟದ ನೋಂದಣಿ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ 5ನೇ ಪ್ರತಿವಾದಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಲು ಜಂಟಿಯಾಗಿ ಒಪ್ಪಿಕೊಂಡಿದ್ದರು. 5ನೇ ಎದುರುದಾರನಿಂದ ಸ್ವೀಕರಿಸಿದ ಮುಂಗಡ ಮಾರಾಟ ಪ್ರತಿಫಲದ ಮೇಲೆ ವಾದಿಗಳು, 1 ರಿಂದ 4ರ ವರೆಗಿನ ಪ್ರತಿವಾದಿಗಳಿಂದ ಹೆಚ್ಚಿನ ಹಣವನ್ನು ಒತ್ತಾಯ ಮಾಡಿದ್ದು, ಇದನ್ನು ನಿರಾಕರಿಸಲಾಗಿತ್ತು. ಹೀಗಾಗಿ ಅಪ್ರಾಮಾಣಿಕ ಉದ್ದೇಶದಿಂದ ವಾದಿಗಳು ವಾದವನ್ನು ಸಲ್ಲಿಸಿದ್ದಾರೆಂದು ನಿವೇದಿಸಿದ್ದಾರೆ.

6. ಪಕ್ಷಕಾರರ ವಾದಗಳನ್ನು ಆಧರಿಸಿ, ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿದೆ:

*"1. ವಾದಿಗಳು, ಸ್ವತಃ ತಾವು ಹಾಗೂ 1 ರಿಂದ 4ರ ವರೆಗಿನ ಪ್ರತಿವಾದಿಗಳು, ವಿಭಜಿಸದ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಅನುಸೂಚಿ ಸ್ವತ್ತುಗಳ ಜಂಟಿ ಒಡೆತನದಲ್ಲಿರುವುದನ್ನು ಸಾಬೀತುಪಡಿಸಿದ್ದಾರೆಯೇ?*

*2. ದಿನಾಂಕ: 28.2.2013ರ ನೋಂದಾಯಿತ ತ್ಯಾಗಪತ್ರವನ್ನು ಮೋಸದಿಂದ, ಒತ್ತಾಯದಿಂದ ಮತ್ತು ಅನುಚಿತ ಪ್ರಭಾವದ ಮೂಲಕ ಮಾಡಲಾಗಿದೆಯೆಂಬುದನ್ನು ವಾದಿಗಳು ರುಜುವಾತುಪಡಿಸಿದ್ದಾರೆಯೇ?*

*3. ಕೋರಿಕೆ ಇಟ್ಟಿರುವ ಪರಿಹಾರಕ್ಕಾಗಿ ವಾದಿಗಳು ಹಕ್ಕುಳ್ಳವರಾಗಿದ್ದಾರೆಯೇ?*

*4. ಆದೇಶ ಅಥವಾ ಡಿಕ್ರಿ ಯಾವುದು?*

*ಹಾಗೂ ಈ ಮುಂದಿನಂತೆ ಉತ್ತರಿಸಲಾಗಿದೆ:*
*ವಿವಾದಾಂಶ ಸಂಖ್ಯೆ:1 : ನಕಾರಾತ್ಮಕವಾಗಿದೆ.*
*ವಿವಾದಾಂಶ ಸಂಖ್ಯೆ:2 : ನಕಾರಾತ್ಮಕವಾಗಿದೆ.*
*ವಿವಾದಾಂಶ ಸಂಖ್ಯೆ:3 : ನಕಾರಾತ್ಮಕವಾಗಿದೆ.*
*ವಿವಾದಾಂಶ ಸಂಖ್ಯೆ:4 : ಅಂತಿಮ ಆದೇಶದ ಪ್ರಕಾರ".*

7. 1ನೇ ವಾದಿಯನ್ನು ಪ್ರಾ.ಸಾ.1 ಎಂದು ವಿಚಾರಣೆ ಮಾಡಿದ್ದು, ನಿಶಾನೆ ಪಿ.1 ರಿಂದ ನಿಶಾನೆ ಪಿ.11ರ ವರೆಗಿನ ದಸ್ತಾವೇಜುಗಳನ್ನು ಗುರುತು ಮಾಡಲಾಗಿದೆ ಮತ್ತು 2ನೇ ವಾದಿಯನ್ನು ಪ್ರಾ.ಸಾ.2 ಎಂದು ವಿಚಾರಣೆ ಮಾಡಲಾಗಿದೆ. 1 ರಿಂದ 4ರ ವರೆಗಿನ ಪ್ರತಿವಾದಿಗಳ ಪರವಾಗಿ, 4ನೇ ಪ್ರತ್ಯರ್ಜಿದಾರನನ್ನು, ಪ್ರತಿವಾದಿ ಸಾಕ್ಷ್ಯ–1 ಎಂದು ವಿಚಾರಣೆ ಮಾಡಲಾಗಿತ್ತು ಮತ್ತು ಪ್ರತಿವಾದಿ ಸಾಕ್ಷ್ಯ 1 ರಿಂದ

5ರ ವರೆಗಿನ ನಿಶಾನೆಗಳನ್ನು ಗುರುತು ಮಾಡಲಾಗಿತ್ತು. ತ್ಯಾಗಪತ್ರಕ್ಕೆ ಸಾಕ್ಷಿದಾರರಲ್ಲೊಬ್ಬರಾದ ಬಿ.ಟಿ. ಕುಂಬಯ್ಯನನ್ನು ಪ್ರತಿವಾದಿ ಸಾಕ್ಷ್ಯ–2 ಎಂದು ವಿಚಾರಣೆ ಮಾಡಲಾಗಿತ್ತು. ದಸ್ತಾವೇಜು ಬರೆದವರೊಬ್ಬರಾದ ಶ್ರೀ ಜಿ. ಚಿಕ್ಕಣ್ಣನವರನ್ನು ಪ್ರತಿವಾದಿ ಸಾಕ್ಷ್ಯ–3 ಎಂದು ವಿಚಾರಣೆ ಮಾಡಲಾಗಿತ್ತು. ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿ, ವೆಚ್ಚಗಳೊಂದಿಗೆ ದಾವೆಯನ್ನು ವಜಾಗೊಳಿಸಲಾಗಿತ್ತು. ಇದರಿಂದ ಬಾಧಿತರಾದ ವಾದಿಗಳು ಈ ಅಪೀಲಿನಲ್ಲಿದ್ದಾರೆ.

8. ವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಸತೀಶ್ ಕೆ.ಎನ್. ರವರನ್ನು ಪ್ರತಿನಿಧಿಸಿ ಮಾನ್ಯ ಹಿರಿಯ ವಕೀಲರಾದ ಶ್ರೀ ಸುಬ್ಬಾರಾವ್‌ರವರು, ಅಧಿವಿಚಾರಣಾ ನ್ಯಾಯಾಲಯವು, ನಿಶಾನೆ ಡಿ.1 ತ್ಯಾಗಪತ್ರವನ್ನು ಮೋಸದಿಂದ ಮಾಡಲಾಗಿದೆ. ನಂತರ, ಅದನ್ನು ಕೋರಲಾದಂತೆ ವಾದಿಗಳ ದಾವೆಯನ್ನು ಡಿಕ್ರಿಗೊಳಿಸಿ ತಳ್ಳಿಹಾಕಬೇಕಾಗಿತ್ತು ಎಂಬ ಅವರ ವಾದವನ್ನು ಬೆಂಗಲಿಸುವಲ್ಲಿ ವಾದಿಗಳು ದಾಖಲೆಯಲ್ಲಿ ಸಲ್ಲಿಸಿದ ಸಾಕ್ಷ್ಯಾಧಾರಗಳನ್ನು ಪರಿಗಣಿಸಲು ಅಧಿವಿಚಾರಣಾ ನ್ಯಾಯಾಲಯವು, ವಿಫಲವಾಗಿದೆಯೆಂದು ನಿವೇದಿಸಿದ್ದಾರೆ. ವಾದಿಗಳು, ಅನಕ್ಷರಸ್ಥರು ಹಾಗೂ ಅಜ್ಞಾನಿಗಳು ಆಗಿದ್ದು ಇವರಿಗೆ ಪ್ರಾಪಂಚಿಕ ಜ್ಞಾನವಿರಲಿಲ್ಲವೆಂದು ವಾದಿಸಲಾಗಿತ್ತು. ಅವರ ಹಿತೈಷಿಗಳು ಎಂದರೆ ಅವರ ಗಂಡಂದಿರು ಹಾಗೂ ಮಕ್ಕಳು ಯಾರೂ ಇರಲಿಲ್ಲವೆಂದೂ ಹಾಗೂ ಅವರು ದಸ್ತಾವೇಜುಗಳನ್ನು ಪ್ರಮಾಣೀಕರಿಸಿ ಸಹಿ ಮಾಡಿಲ್ಲವೆಂದು ವಾದಿಸಿದ್ದಾರೆ. 1 ರಿಂದ 4ರ ವರೆಗಿನ ಪ್ರತಿವಾದಿಗಳು, ನಿಶಾನೆ ಡಿ.1ರ ಸಾರಾಂಶವನ್ನು ತಿಳಿಸದೆ ಅಥವಾ ಓದದೆ ನಿಶಾನೆ ಡಿ.1ರಲ್ಲಿ ಸಹಿಯನ್ನು ಪಡೆದುಕೊಂಡು ಖಾತಾವನ್ನು ಬದಲಾಯಿಸುವ ನೆಪದ ಮೇಲೆ ವಾದಿಗಳನ್ನು ಸಬ್ ರಿಜಿಸ್ಟ್ರಾರ್‌ರವರ ಕಚೇರಿಗೆ ಕರೆದೊಯ್ದಿದ್ದಾರೆ. 6 ಲಕ್ಷ ರೂಪಾಯಿಗಳನ್ನು ವಾದಿಗಳಿಗೆ ಸಂದಾಯ ಮಾಡಿರುವುದನ್ನು ತೋರಿಸಲು ಪ್ರತಿವಾದಿಗಳು ತೃಪ್ತಿಕರ ರುಜುವಾತನ್ನು ದಾಖಲೆಯಲ್ಲಿಟ್ಟಿಲ್ಲ. ಈ ಪ್ರಮುಖ ಸಂಗತಿಗಳನ್ನು, ಅಧಿವಿಚಾರಣಾ ನ್ಯಾಯಾಲಯವು ಯುಕ್ತವಾಗಿ ಪರಿಶೀಲಿಸಿಲ್ಲ ಮತ್ತು ಪರಿಗಣಿಸಿಲ್ಲ. ಅಷ್ಟೇ ಅಲ್ಲದೆ, ಸದರಿ ದಸ್ತಾವೇಜನ್ನು

ಬಹಿರಂಗಪಡಿಸದಿರುವುದರಿಂದ ದಾವಾ ಸ್ವತ್ತುಗಳಲ್ಲಿ ವಾದಿಗಳ ಹಕ್ಕುಗಳ ಬಿಡುಗಡೆ ಅಥವಾ ತ್ಯಾಗ ಎಂದು ಭಾವಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದರು. ವಾದಿಗಳು ಹಾಜರುಪಡಿಸಿದ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಪರಿಗಣಿಸದಿರುವುದು ನ್ಯಾಯದ ಗಂಭೀರ ವಿಫಲತೆಗೆ ಕಾರಣವಾಗಿದೆ. ಅಧಿವಿಚಾರಣಾ ನ್ಯಾಯಾಲಯವು, ಸಾಧ್ಯತೆಗಳನ್ನು ಪರಿಗಣಿಸದೆ ದಾವೆಯನ್ನು ವಜಾಗೊಳಿಸುವಲ್ಲಿ ಯಾವುದೇ ಸಾಕ್ಷ್ಯಾಧಾರ ವೈರುದ್ಯಗಳು ಮತ್ತು ದೋಷಗಳನ್ನು ಇದು ಎಸಗದಿರುವುದರಿಂದ 1 ರಿಂದ 3ರ ವರೆಗಿನ ಪ್ರತಿವಾದಿ ಸಾಕ್ಷ್ಯಗಳ ಸಾಕ್ಷ್ಯದಲ್ಲಿ ಕಂಡುಬರುವ ವೈರುದ್ಯಗಳನ್ನು ನಿರ್ಲಕ್ಷಿಸಿದೆ. ಹೀಗಾಗಿ, ನಿಶಾನೆ ಡಿ.1 ಮೋಸದ ದಸ್ತಾವೇಜಾಗಿದ್ದು, ದಾವಾ ಸ್ವತ್ತನ್ನು ಹಸ್ತಾಂತರಿಸಲು 1 ರಿಂದ 4ರ ವರೆಗಿನ ಪ್ರತಿವಾದಿಗಳಿಗೆ ಯಾವುದೇ ಹಕ್ಕು, ಅಧಿಕಾರವನ್ನು ಇದು ಪ್ರದಾನ ಮಾಡುವುದಿಲ್ಲವೆಂದು ನಿವೇದಿಸಿದ್ದರು.

9. ಅವರ ವಾದಗಳನ್ನು ಬೆಂಬಲಿಸಲು ಮಾನ್ಯ ಹಿರಿಯ ವಕೀಲರು ಈ ಮುಂದಿನ ತೀರ್ಪುಗಳನ್ನು

i) ***ಭಾರತ ಒಕ್ಕೂಟ ವಿರುದ್ಧ ಕೆ.ವಿ. ಲಕ್ಷ್ಮಣ್ ಮತ್ತು ಇತರರು*** [1];

ii) ***ಶ್ರೀಮತಿ ಎಮ್‌ಎಸ್‌ಟಿ ಖರಬೂಜ ಕ್ಯೂರ್ –ವಿರುದ್ಧ– ಜಂಗ್ ಬಹದ್ದೂರ್ ರೈ ಮತ್ತು ಇತರರು***[2];

iii) ***ಶ್ರೀಮತಿ ಎಂಎಸ್‌ಟಿ ಸೇತಾನಿ – ವಿರುದ್ಧ – ಭಾನಾ***[3];

iv) ***ಕೃಷ್ಣ ಮೋಹನ್ ಕುಲ್ ಅಲಿಯಾಸ್ ನಾನಿ ಚರಣ್ ಕುಲ್ ಮತ್ತು ಮತ್ತೊಬ್ಬರು –ವಿರುದ್ಧ– ಪ್ರತಿಮಾ ಮೈಟಿ ಮತ್ತು ಇತರರು***[4]; ಮತ್ತು

1. (2016) 13 ಎಸ್‌ಸಿಸಿ 124
2. ಎಐಆರ್ 1963 ಎಸ್‌ಸಿ 1203
3. ಎಐಆರ್ 1993 ಎಸ್‌ಸಿ 956
4. ಎಐಆರ್ 2003 ಎಸ್‌ಸಿ 4351

iv) ***ಎ. ವೆಂಕಪ್ಪ ಭಟ್ಟ ಮತ್ತು ಇತರರು –ವಿರುದ್ಧ– ಗಂಗಮ್ಮ ಮತ್ತು ಇತರರು***[5].

10. ನಾವು, ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದವನ್ನು ಆಲಿಸಿ ಅಪೀಲುದಾರರು ಹಾಜರುಪಡಿಸಿರುವ ಸಾಕ್ಷ್ಯದ ಸಂಕಲನದ ದಾಖಲೆಯಲ್ಲಿರುವ ಸಾಕ್ಷ್ಯಾಧಾರಗಳನ್ನು ಅವಗಾಹಿಸಿದ್ದೇವೆ.

11. ಪ್ರಕರಣದ ಸಾಕ್ಷ್ಯವನ್ನು ಪರಿಶೀಲಿಸಲಾಗಿದೆ (ಇದರ ಪ್ರತಿಯನ್ನು ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಿಗೆ ಲಭ್ಯವಾಗುವಂತೆ ಮಾಡಲಾಗಿದೆ). ನಿರ್ವಿವಾದವಾಗಿ, ವಾದಿಗಳು ಮತ್ತು 1 ರಿಂದ 4ರ ವರೆಗಿನ ಪ್ರತಿವಾದಿಗಳು ರಾಮಯ್ಯ ಮತ್ತು ಲಕ್ಷ್ಮಮ್ಮ ಎಂಬುವರ ಮಕ್ಕಳುಗಳಾಗಿದ್ದಾರೆ. 1ನೇ ಸಂಖ್ಯೆಯ ಬಾಬ್ತಿನ ದಾವಾ ಅನುಸೂಚಿ ಸ್ವತ್ತನ್ನು ದಿನಾಂಕ: 26.9.1979ರ ನೋಂದಾಯಿತ ಕ್ರಯಪತ್ರದ ಅಡಿಯಲ್ಲಿ ಲಕ್ಷ್ಮಮ್ಮಳು ಖರೀದಿಸಿದ್ದಳು ಮತ್ತು 2ನೇ ಸಂಖ್ಯೆಯ ದಾವಾ ಸ್ವತ್ತಿನ ಬಾಬ್ತು ವಾದಿಗಳು ಮತ್ತು 1 ರಿಂದ 4 ರ ವರೆಗಿನ ಸಂಖ್ಯೆಗಳ ಪ್ರತಿವಾದಿಗಳ ಪೂರ್ವಜರ ಸ್ವತ್ತಾಗಿದೆ ಎಂಬುದರಲ್ಲೂ ಯಾವುದೇ ವಿವಾದವಿಲ್ಲ. ಅಷ್ಟೇ ಅಲ್ಲದೆ, ವಾದಿಗಳು, 1 ರಿಂದ 4ರ ವರೆಗಿನ ಪ್ರತಿವಾದಿಗಳ ಹೆಸರಿನಲ್ಲಿ ದಾವಾ ಸ್ವತ್ತುಗಳ ಮೇಲೆ ಅವರ ಹಕ್ಕು ಮತ್ತು ಅಧಿಕಾರವನ್ನು ಮುಕ್ತಿಗೊಳಿಸುವ / ತ್ಯಾಗ ಮಾಡುವ ನೋಂದಾಯಿತ ತ್ಯಾಗ ಪತ್ರವನ್ನು ದಿನಾಂಕ: 28.2.2013ರಂದು ನಡೆಸಿಕೊಟ್ಟಿರುವರು ಎಂಬುದರಲ್ಲೂ ಯಾವುದೇ ವಿವಾದವಿಲ್ಲ. ಆದರೆ ಆಪಾದನೆಯೇನೆಂದರೆ, ನಿಶಾನೆ ಪಿ.10ರಲ್ಲಿರುವ ಸದರಿ ತ್ಯಾಗಪತ್ರವನ್ನು ಮುಗ್ಧರಾದ ಅಜ್ಞಾನ ಮತ್ತು ಅನಕ್ಷರತೆಯ ಅನುಚಿತ ಅನುಕೂಲ ಪಡೆದುಕೊಂಡು ಮೋಸ, ಬಲವಂತದ ಮೂಲಕ ಮತ್ತು ವಾದಿಗಳ ಅನುಚಿತ ಪ್ರಭಾವ ಬಳಸಿ 1 ರಿಂದ 4ರ ವರೆಗಿನ ಪ್ರತಿವಾದಿಗಳು ಪಡೆದುಕೊಂಡಿದ್ದರು ಎಂಬುದಾಗಿದೆ. ಇದನ್ನು ರುಜುವಾತುಪಡಿಸಲು ವಾದಿಗಳು, ಪ್ರಾ.ಸಾ.1 ಮತ್ತು ಪ್ರಾ.ಸಾ.2 ಎಂದು ಅವರೇ ಪರಿಶೀಲನೆ ಮಾಡಿಕೊಂಡು ನಿಶಾನೆ ಪಿ.1 ರಿಂದ

5. ಎಐಆರ್ 1988 ಕೇರಳ 133

ನಿಶಾನೆ ಪಿ.11ರ ವರೆಗೆ ಗುರುತು ಮಾಡಲಾಗಿರುತ್ತದೆ. ಮಾನ್ಯ ವಕೀಲರು, ವಾದಿಗಳ ಮುಗ್ಧತೆ ಮತ್ತು ಅನಕ್ಷರತೆಯ ಸೋಗು ಹಾಕಿದ ವಾದಪತ್ರ ದೃಢೋಕ್ತಿಗಳನ್ನು ಪುನರುಚ್ಚರಿಸಿರುವ ಸದರಿ ಸಾಕ್ಷಿದಾರರ ಸಾಕ್ಷ್ಯಕ್ಕೆ ಈ ನ್ಯಾಯಾಲಯದ ಗಮನವನ್ನು ಸೆಳೆದಿದ್ದಾರೆ. ತ್ಯಾಗಪತ್ರದಲ್ಲಿ ಬಿಂಬಿಸಿರುವಂತೆ 6 ಲಕ್ಷ ರೂ. ಮೊತ್ತವನ್ನು ತಮಗೆ ನೀಡಿರುವುದಿಲ್ಲವೆಂಬುದೂ ಕೂಡ ಅವರ ವಾದವಾಗಿದೆ. ವಾದಿಗಳ ಸದರಿ ಸಾಕ್ಷ್ಯವನ್ನು ಖಂಡಿಸಲು, ಪ್ರತಿವಾದಿಗಳು, ಮೂರು ಜನ ಸಾಕ್ಷಿದಾರರನ್ನು ಪರಿಶೀಲಿಸಿದ್ದು, ಪ್ರತಿವಾದಿ ಸಾಕ್ಷ್ಯ.1 ಇವರು 4ನೇ ಪ್ರತಿವಾದಿಯಾಗಿದ್ದಾನೆ. ಪ್ರತಿವಾದಿ ಸಾಕ್ಷ್ಯ.2 ತ್ಯಾಗಪತ್ರಕ್ಕೆ ಸಾಕ್ಷಿದಾರನಾಗಿದ್ದಾನೆ ಹಾಗೂ ಪ್ರತಿವಾದಿ ಸಾಕ್ಷ್ಯ 3 ತುಮಕೂರಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ದಸ್ತಾವೇಜು ಬರೆಯುವವನಾಗಿದ್ದಾನೆ. ಪ್ರತಿವಾದಿಸಾಕ್ಷ್ಯ.2 ಹಾಗೂ ಪ್ರತಿವಾದಿಸಾಕ್ಷ್ಯ.3ರ ಪುರಾವೆಯು ವಾದಿಗಳ ಆಪಾದನೆಗಳನ್ನು ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದುದಾಗಿದೆ. ಪ್ರತಿವಾದಿ ಸಾಕ್ಷ್ಯ.2 ತನ್ನ ಪಾಟೀ ಸವಾಲಿನಲ್ಲಿ, 3 ರಿಂದ 4ರ ವರೆಗೆ ಪಂಚಾಯತ್ ಸಭೆಗಳನ್ನು ರಾಮಯ್ಯನವರ ಮನೆಯಲ್ಲಿ ನಡೆಸಲಾಗಿತ್ತೆಂದು ತಿಳಿಸಿದ್ದಾರೆ. ವಾದಿಗಳು ಹಾಗೂ ಅವರ ಪತಿ/ಪತ್ನಿ ಆ ಸಮಯದಲ್ಲಿ ಬಂದಿದ್ದು, ಅವರು ಸದರಿ ಸಭೆಗಳಿಗೂ ಹಾಜರಾಗಿದ್ದರು. 4ನೇ ಸಂಖ್ಯೆಯ ಪ್ರತಿವಾದಿಯು ಆ ಸಮಯದಲ್ಲಿ ಹಾಜರಿದ್ದರು. ವಾದಿಗಳು ದಾವಾ ಸ್ವತ್ತುಗಳ ಮೇಲೆ ತಮ್ಮ ಹಕ್ಕುಗಳನ್ನು ಚಲಾಯಿಸಲು ಹಣಕ್ಕೆ ಒತ್ತಾಯಿಸಿದ್ದರು. ಹೀಗಾಗಿ, 1 ರಿಂದ 4ರವರೆಗಿನ ಪ್ರತಿವಾದಿ ಹಣವನ್ನು ನೀಡಲು ಒಪ್ಪಿಕೊಂಡಿದ್ದರು. ಪ್ರಾರಂಭದಲ್ಲಿ, ಇಬ್ಬರೂ ವಾದಿಗಳು 10 ಲಕ್ಷ ರೂ.ಗಳಿಗೆ ಕೋರಿದ್ದು, 1 ರಿಂದ 4 ರ ವರೆಗಿನ ಪ್ರತಿವಾದಿಗಳು ಇದಕ್ಕೆ ಒಪ್ಪಿರಲಿಲ್ಲ. ವಾದಿಗಳು 8 ಲಕ್ಷ ರೂ.ಗಳಿಗೆ ಒತ್ತಾಯ ಮಾಡಿದ್ದು, ಇದಕ್ಕಾಗಿ, 1 ರಿಂದ 4ರವರೆಗಿನ ಪ್ರತಿವಾದಿಗಳು ಮಣಿದಿರಲಿಲ್ಲ. ವಾದಿಗಳು 6 ಲಕ್ಷ ರೂ.ಗಳಿಗೆ ಬೇಡಿಕೆಯಿಟ್ಟಿದ್ದು, ಇದನ್ನು 1 ರಿಂದ 4ರ ವರೆಗಿನ ಪ್ರತಿವಾದಿಗಳು ಒಪ್ಪಿಕೊಂಡಿದ್ದರು. ಈ ಸಾಕ್ಷಿದಾರರು ನೇರವಾಗಿ, ವಾದಿಗಳು ಹಕ್ಕುಗಳನ್ನು ಚಲಾಯಿಸುವ ಪತ್ರವನ್ನು ಬರೆದುಕೊಡಲು ಸಾಕ್ಷಿದಾರರಾಗಿರುವುದನ್ನು ತಿಳಿಸಿದ್ದಾರೆ. ಈ ಸಂಬಂಧದಲ್ಲಿ ಸದರಿ ಸಾಕ್ಷಿದಾರರಿಗೆ ಸಲಹೆ ನೀಡಿ, 1 ರಿಂದ 4ರ ವರೆಗಿನ ಪ್ರತಿವಾದಿಗಳು, 6 ಲಕ್ಷ ರೂ.ಗಳನ್ನು ನೀಡುವುದನ್ನು ಸಂಪೂರ್ಣವಾಗಿ

ನಿರಾಕರಿಸಿದ್ದಾರೆ. ಅವರಿಗೆ 6 ಲಕ್ಷ ರೂ.ಗಳ ರಸೀದಿಯನ್ನು ನಿರಾಕರಿಸಲು ಈ ಸಾಕ್ಷಿದಾರರಿಂದ ವಾದಿಗಳು ಯಾವುದೇ ನಕಾರಾತ್ಮಕ ಅಂಶ ಹಾಗೂ ತ್ಯಾಗಪತ್ರದ ಮೋಸದ ಸ್ವರೂಪ ಕಂಡುಬಂದಿರುವುದಿಲ್ಲ. ಪ್ರತಿವಾದಿ ಸಾಕ್ಷ್ಯ.2 ತಾನು ಸಾಕ್ಷ್ಯವಾಗಿ ತ್ಯಾಗಪತ್ರ ನಿಶಾನೆ ಪಿ.10ಕ್ಕೆ ಸಹಿ ಹಾಕಿರುವುದನ್ನು ಒಪ್ಪಿಕೊಂಡಿದ್ದಾನೆ. ಪ್ರತಿವಾದಿ ಸಾಕ್ಷ್ಯ.3, ತುಮಕೂರಿನ ಸಬ್–ರಿಜಿಸ್ಟ್ರಾರ್ ಕಚೇರಿಯಲ್ಲಿ ದಸ್ತಾವೇಜು ಬರೆಯುವವ ನಿಶಾನೆ ಪಿ.10ರ ದಸ್ತಾವೇಜಿನ ಲಿಪಿಕಾರನಾಗಿದ್ದಾನೆ. ಈ ಸಾಕ್ಷಿದಾರನು, ವಾದಿಗಳು ನನ್ನ ಮತ್ತು ಇತರ ಸಾಕ್ಷಿದಾರರ ಸಮ್ಮುಖದಲ್ಲಿ 1 ರಿಂದ 4 ರ ವರೆಗಿನ ಪ್ರತಿವಾದಿಗಳಿಂದ ನಗದು ರೂಪದಲ್ಲಿ 6 ಲಕ್ಷ ರೂಪಾಯಿಗಳನ್ನು, ತ್ಯಾಗಪತ್ರಕ್ಕೆ ಸಹಿ/ಹೆಬ್ಬೆರಳ ಗುರುತನ್ನು ಹಾಕುವ ಮೊದಲು ಸ್ವೀಕರಿಸಿದರೆಂದು ಹೇಳಿಕೆ ನೀಡಿದ್ದಾನೆ. ಸದರಿ ಪತ್ರವನ್ನು ಪಕ್ಷಕಾರರು ನೀಡಿದ ಮಾಹಿತಿಯ ಮೇಲೆ ಸಿದ್ಧಪಡಿಸಲಾಗಿತ್ತು. ಸ್ಟ್ಯಾಂಪು ಪೇಪರುಗಳನ್ನು ವಾದಿಗಳು ಖರೀದಿಸಿದ್ದು, ಅವನಿಗೆ ಹಸ್ತಾಂತರಿಸಿದ್ದಾರೆ. ವಾದಿಗಳು ಮಾಡಿದ ಕೋರಿಕೆಯಂತೆ ತ್ಯಾಗಪತ್ರವನ್ನು ದಿನಾಂಕ 28.02.2013ರಂದು ಕರಡು ಮಾಡಲಾಗಿತ್ತು ಮತ್ತು ಅದನ್ನು 6 ಲಕ್ಷ ರೂ.ಗಳನ್ನು ಸ್ವೀಕರಿಸಿದ ನಂತರ ವಾದಿಗಳಿಗೆ ಓದಲಾಗಿದ್ದು, ವಾದಿಗಳು ಹಾಗೂ ಸಾಕ್ಷಿದಾರರಿಬ್ಬರೂ ನಿಶಾನೆ ಪಿ.10ಕ್ಕೆ ಸಹಿ ಹಾಕಿದ್ದರು.

12. ಪ್ರತಿವಾದಿ ಸಾಕ್ಷ್ಯ.2 ಮತ್ತು ಪ್ರತಿವಾದಿ ಸಾಕ್ಷ್ಯ.3ರ ಸಾಕ್ಷ್ಯವು, ವಾದಿಗಳು ನಿಶಾನೆ ಡಿ.1ರ ಪ್ರಕಾರ ಅವಿಭಕ್ತ ಕುಟುಂಬ ಸ್ವತ್ತಿನ ಅವರ ಹಕ್ಕು ಅಧಿಕಾರ ಮತ್ತು ಹಿತಾಸಕ್ತಿಯನ್ನು ತ್ಯಾಗಮಾಡಿದ್ದು ಸ್ವಂತ ಇಚ್ಛೆ ಹಾಗೂ ಸಂಕಲ್ಪದ ಮೇಲೆ 1 ರಿಂದ 4ರ ವರೆಗಿನ ಪ್ರತಿವಾದಿಗಳಿಂದ 6 ಲಕ್ಷ ರೂ.ಗಳ ಮೊತ್ತವನ್ನು ಸ್ವೀಕರಿಸಿರುವರು ಎಂಬುದನ್ನು ಸೂಚಿಸುತ್ತವೆ. ನಿಶಾನೆ ಡಿ.1 (ನಿಶಾನೆ ಪಿ.10)ನ್ನು 1 ರಿಂದ 4ರ ವರೆಗಿನ ಪ್ರತಿವಾದಿಗಳು ಮೋಸದಿಂದ ಪಡೆದುಕೊಂಡಿದ್ದರೆಂಬುದು ವಾದಿಗಳ ವಾದವಾಗಿದೆ. ವಾದಿಗಳು ಮಾಡಿದ ಸ್ವತಃ ಹೇಳಿಕೆಯನ್ನು ಹೊರತುಪಡಿಸಿದರೆ, ಇತರ ಯಾರೇ ಸ್ವತಂತ್ರ ಸಾಕ್ಷಿದಾರನನ್ನು ಪರಿಶೀಲಿಸಿರಲಿಲ್ಲ ಅಥವಾ ಯಾವುದೇ ಸಮುಚಿತ ದಸ್ತಾವೇಜೀಯ ಸಾಕ್ಷ್ಯವನ್ನು ಅದಕ್ಕೆ ಸಾಕಷ್ಟು ಇಟ್ಟಿರಲಿಲ್ಲ. ಉಳಿದ ಆಪಾದನೆಗಳು ರುಜುವಾತಾಗಿರುವುದಿಲ್ಲ. ಮತ್ತೊಂದು

ಕಡೆ, 1 ರಿಂದ 4ರ ವರೆಗಿನ ಪ್ರತಿವಾದಿಗಳು, ಪ್ರಕರಣದ ಸಾಧ್ಯತೆಗಳು ಹಾಗೂ ಸನ್ನಿವೇಶಗಳನ್ನು ಪರಿಗಣಿಸಿ ಪ್ರತಿವಾದಿ ಸಾಕ್ಷ್ಯ 1 ಹಾಗೂ ಲಿಪಿಕಾರ, ಪ್ರತಿವಾದಿ ಸಾಕ್ಷ್ಯ2 ದಸ್ತಾವೇಜಿನ ಸಾಕ್ಷಿದಾರನನ್ನು ಪರಿಶೀಲಿಸುವ ಮೂಲಕ ತಮ್ಮ ವಾದವನ್ನು ರುಜುವಾತುಪಡಿಸಿದ್ದು, 1 ರಿಂದ 4 ರ ವರೆಗಿನ ಪ್ರತಿವಾದಿಗಳ ಸಾಕ್ಷ್ಯವು, ವಾದಿಗಳು ಮಾಡಿದ ಆಪಾದನೆಗಿಂತಲೂ ಹೆಚ್ಚು ಸಾಧ್ಯತೆಯನ್ನು ಹೊಂದಿದೆ. ವಾದಿಗಳು ತ್ಯಾಗಪತ್ರವನ್ನು ಬರೆದುಕೊಟ್ಟ ನಂತರ, ದಾವಾ ಸ್ವತ್ತುಗಳ ಖಾತಾ ಹಾಗೂ ಪಹಣಿಯನ್ನು 1 ರಿಂದ 4ರವರೆಗಿನ ಪ್ರತಿವಾದಿಗಳ ಹೆಸರಿಗೆ ಪರಿವರ್ತಿಸಲಾಗಿತ್ತು. ಆರ್.ಟಿ.ಸಿ. ಉದ್ಧೃತಗಳನ್ನು ಸಹ ಬದಲಾಯಿಸಲಾಗಿದೆ. ವಾದಿಗಳು, ಸದರಿ ಪರಿವರ್ತನಾ ನಮೂದುಗಳನ್ನು ಪ್ರಶ್ನಿಸುವ ಯಾವುದೇ ಪ್ರಯತ್ನವನ್ನು ಮಾಡಿಲ್ಲ. ಅಂಥ ಸನ್ನಿವೇಶಗಳಲ್ಲಿ 1 ರಿಂದ 4ರವರೆಗಿನ ಪ್ರತಿವಾದಿಗಳು ಹಾಗೂ ವಾದಿಗಳ ಅವಿಭಕ್ತ ಕುಟುಂಬದ ಸ್ಥಾನಮಾನವು, ನಗದಿನ ರೂಪದಲ್ಲಿ ಅವಿಭಕ್ತ ಕುಟುಂಬ ಸ್ವತ್ತುಗಳಲ್ಲಿನ ಅವರ ಭಾಗವನ್ನು ಸ್ವೀಕರಿಸಿ ತ್ಯಾಗಪತ್ರವನ್ನು ಬರೆಸಿಕೊಳ್ಳುವ ಮೂಲಕ ಕಟ್ಟುನಿಟ್ಟು ಮಾಡಲಾಗಿದೆ. ಅವರ ಅವಿಭಕ್ತ ಕುಟುಂಬ ಸ್ಥಾನಮಾನ ಕಟ್ಟುನಿಟ್ಟಾಗಿರುವುದರಿಂದ, ಪ್ರತ್ಯೇಕತೆಯ ಪರಿಹಾರ ಹಾಗೂ ದಾವಾ ಸ್ವತ್ತುಗಳಲ್ಲಿನ ಅವರ 1/6 ಭಾಗದ ಪ್ರತ್ಯೇಕ ಸ್ವಾಧೀನತೆಯನ್ನು ವಜಾಗೊಳಿಸಬೇಕಾಗುತ್ತದೆ.

13. ದಿನಾಂಕ 7.11.2013ರ ಸಿ.ಡಿ.ಸಂಖ್ಯೆ ಟಿ.ಎಂ.ಕೆ.ಡಿ 481ರಲ್ಲಿ ಸಂಗ್ರಹಿಸಿಡಲಾದ ಪುಸ್ತಕ ಸಂಖ್ಯೆ. IVರ ಸಂಪುಟ ಸಂ.ಟಿ.ಎಂ.ಕೆ – 4/00595/13–14ರಲ್ಲಿ, ತುಮಕೂರಿನ ಸಬ್–ರಿಜಿಸ್ಟ್ರಾರ್‌ರವರ ಕಚೇರಿಯಲ್ಲಿ ನೋಂದಾಯಿಸಲಾದ ದಿನಾಂಕ:28.2.2013ರ ತ್ಯಾಗಪತ್ರವನ್ನು ರದ್ದುಗೊಳಿಸುವುದನ್ನು ಬಿಡುವುದಕ್ಕೆ ಸಂಬಂಧಿಸಿದಂತೆ, ಸದರಿ ತ್ಯಾಗಪತ್ರವನ್ನು ಮೋಸದಿಂದ, ಬಲಾತ್ಕಾರದಿಂದ ಹಾಗೂ ಅನುಚಿತ ಪ್ರಭಾವದಿಂದ ಮಾಡಲಾಗಿತ್ತೆಂದು ರುಜುವಾತುಪಡಿಸಲು ವಾದಿಗಳು ವಿಫಲವಾಗಿರುವುದರಿಂದ ವಜಾಗೊಳಿಸಬಹುದಾಗಿದೆ.

14. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ಹಿರಿಯ ನ್ಯಾಯವಾದಿಗಳು, ವಾದಿಗಳ ಅನಕ್ಷರತೆ ಹಾಗೂ ಮುಗ್ಧತೆ ಬಗ್ಗೆ ಹೆಚ್ಚು ಒತ್ತು

ಕೊಟ್ಟಿದ್ದಾರೆ. ವಾದಿಗಳ ಗಂಡಂದಿರು, ಅನುಪ್ರಮಾಣಕ ಸಾಕ್ಷಿದಾರರು ಅಥವಾ ಸಾಕ್ಷಿದಾರರಾಗಿರುವುದರಿಂದ ತ್ಯಾಗಪತ್ರ ಮಾಡಿದವರಾಗಿರುವುದಿಲ್ಲ. ಅವರ ವಾದವನ್ನು ಸಮರ್ಥಿಸಲು ಮಾನ್ಯ ವಕೀಲರು, ***ಖರಬೂಜ ಕ್ಯೂರ್ (ಮೇಲಿನ)*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.

ಸದರಿ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯದಿಂದ ನೀಡಲಾಗಿದ್ದು, ಇದರಲ್ಲಿ ರಾಮೇಶ್ವರ್ ರಾಯ್‌ರವರ ವಿಧವೆಯಾಗಿರುವ ವಾದಿಯ ಸಂದರ್ಭದಲ್ಲಿ, ಅವಳ ಪತಿ ಮತ್ತು 1ನೇ ಸಂಖ್ಯೆಯ ಪ್ರತಿವಾದಿಯು ಇದರಲ್ಲಿ, 1924ರಲ್ಲಿ ಅಥವಾ ಸುಮಾರು 1924ರಲ್ಲಿ ಕುಟುಂಬದ ಸ್ವತ್ತಿನ ಭಾಗಮಾಡಿದ್ದು, ಭಾಗ ಮಾಡಿದ ನಂತರ ಅವಳ ಪತಿಯು ಪ್ರತ್ಯೇಕ ಭಾಗವನ್ನು ಹೊಂದಿದ್ದು, ಅವಳ ಪತಿ ಭಾಗ ಮಾಡಿದ ನಂತರ, ಅವಳ ಅತ್ತೆಯು, ಸದರಿ ಸ್ವತ್ತಿನ ಸ್ವಾಧೀನತೆಯನ್ನು ಮುಂದುವರೆಸಿದ್ದಳೆಂದು ಮುಖ್ತ್ಯಾರನಾಮೆಯಾಗಿರುವುದನ್ನು ನಂಬಿ, 1ನೇ ಪ್ರತಿವಾದಿಯ ಹೆಸರಿನಲ್ಲಿ ದಸ್ತಾವೇಜನ್ನು ನೆರವೇರಿಸಿದ್ದು ಅವರು ಪರ್ದಾನಾಶಿನ್ ಮಹಿಳೆಯರಾಗಿದ್ದರೆನ್ನುವ ಅರ್ಥದಲ್ಲಿ ಸರ್ವೋಚ್ಚ ನ್ಯಾಯಾಲಯವು ತೀರ್ಪನ್ನು ನೀಡಿತ್ತು. ಅದರ ತರುವಾಯ ಇದು ದೋಷಯುಕ್ತ ಒಕ್ಕಣೆಯಿಂದ ಕೂಡಿರುವ ನಿರ್ವಹಣಾ ಪತ್ರವಾಗಿದ್ದುದು ಅವರಿಗೆ ತಿಳಿದುಬಂದಿದೆ. ಸದರಿ ಅರ್ಥದಲ್ಲಿ ಅದರ ಒಳಾಂಶಗಳು ತಿಳಿವಳಿಕೆಗೆ ಬಂದು ವಾದಿಯು ಅದನ್ನು ಮಾಡಿದ್ದನೆಂದು ಮತ್ತು ವಾದಿ ಮತ್ತು ಅವಳ ಅತ್ತೆಯು ಮುಖ್ತ್ಯಾರನಾಮೆಯ ಗುರುತಿನ ಅಡಿಯಲ್ಲಿ ಅವರ ಹೆಬ್ಬೆರಳ ಗುರುತನ್ನು ಹಾಕುವುದರೊಂದಿಗೆ ವಾದಿಯು ಇದನ್ನು ಮಾಡಿದ್ದನೆಂಬುದನ್ನು ರುಜುವಾತುಪಡಿಸಿರಲಿಲ್ಲ ಅಷ್ಟೇ ಅಲ್ಲ, 1ನೇ ಪ್ರತಿವಾದಿಗೆ ಹೊಣೆಗಾರಿಕೆಯನ್ನು ಹೊರಿಸಲಾಗಿತ್ತೆಂಬ ಅಭಿಪ್ರಾಯಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆಯೆಂದು ಅಭಿಪ್ರಾಯಪಡಲಾಗಿತ್ತು. ಉಚ್ಚ ನ್ಯಾಯಾಲಯವು, ಮೊದಲ ಎರಡು ನ್ಯಾಯಾಲಯಗಳು ನೀಡಿದ ಸಂಗತಿಗಳ ಸಮ್ಮತ ನಿರ್ಣಯದಲ್ಲಿ ದೋಷಯುಕ್ತವಾಗಿ ಹಸ್ತಕ್ಷೇಪ ಮಾಡಿದೆಯೆಂದು ಅಭಿಪ್ರಾಯಪಡಲಾಗಿತ್ತು. ಆದರೆ ಪ್ರಸ್ತುತ ಪ್ರಕರಣದಲ್ಲಿ, ದಾಖಲೆಯಲ್ಲಿರುವ ಸಾಕ್ಷ್ಯವು, ಸಕಾರಾತ್ಮಕವಾಗಿ ಹಾಗೂ ನಿರ್ಣಯಾತ್ಮಕವಾಗಿ, ಪತ್ರವನ್ನು ವಾದಿಗಳು ಮಾತ್ರವೇ ಬರೆದುಕೊಟ್ಟಿಲ್ಲ ಆದರೆ,

ಅವರಿಗೆ ಇದನ್ನು ವಿವರಿಸಲಾಗಿತ್ತು ಹಾಗೂ ವಾಸ್ತವವಾಗಿ ಅವರು ಅದನ್ನು ಅರ್ಥ ಮಾಡಿಕೊಂಡಿದ್ದರು ಎಂಬುದನ್ನು ರುಜುವಾತುಪಡಿಸುತ್ತದೆ. ಪತ್ರಕ್ಕೆ ಬಲವಂತದಿಂದ ಸಹಿ ಹಾಕಿಲ್ಲವೆಂದೂ ಆದರೆ, ವಾದಿಗಳ ಮುಕ್ತ ಹಾಗೂ ಸ್ವತಂತ್ರ ಉಯಿಲಿನ ಮುಖಾಂತರ ಮಾಡಲಾಗಿತ್ತು ಎಂಬುದನ್ನು ಸಾಬೀತುಪಡಿಸಿದೆ. ***ಸೇಥಾನಿ*** (ಮೇಲಿನ) ಪ್ರಕರಣದಲ್ಲಿ ಮಾನ್ಯ ಹಿರಿಯ ವಕೀಲರು ಮತ್ತೊಂದು ತೀರ್ಪನ್ನು ಅವಲಂಬಿಸಿದ್ದು, ಇದರಲ್ಲಿ, ಮಾರಾಟದ ಸಮಯದಲ್ಲಿ ಯಾವುದೇ ಪ್ರತಿಫಲವನ್ನು ನೀಡಿರಲಿಲ್ಲವೆನ್ನುವ ಅದರ ಪ್ರಮಾಣಿತ ಪ್ರತಿಯಿಂದ ಇದು ತುಂಬಾ ಸ್ಪಷ್ಟವಾಗುತ್ತದೆ. ನೋಂದಣಿ ಕಚೇರಿಯಿಂದ ಮಾರಾಟವನ್ನು ವಿವರಿಸುವುದನ್ನು ಯಾರೂ ಪರಿಶೀಲಿಸಿಲ್ಲ. ಮಾರಾಟಗಾರನು ವೃದ್ಧ, ಕುರುಡ, ಅನಕ್ಷರಸ್ಥ ಮತ್ತು ಬುಡಕಟ್ಟು ಮಹಿಳೆ ಏನೇ ಆಗಿದ್ದರೂ, ಒಟ್ಟಾರೆಯಾಗಿ, ಎದುರುದಾರನ ಕರುಣೆಯಿಂದ ಅವಳು ಅವನೊಂದಿಗೆ ಸಾಯುವವರೆಗೂ ಬದುಕಿದ್ದಳು, ಮಾರಾಟ ಪತ್ರವನ್ನು ಯಾವುದೇ ಸಮುಚಿತವಲ್ಲದ ಪ್ರಭಾವವಿಲ್ಲದೆ ಬರೆದುಕೊಟ್ಟಿರುವರು ಎನ್ನುವ ಜವಾಬ್ದಾರಿಯನ್ನು ನಿರ್ವಹಿಸಲು ಯಾವುದೇ ಸಾಕ್ಷ್ಯವನ್ನು ಎದುರುದಾರನು ತೋರಿಸಿರುವುದಿಲ್ಲ. ಹಿಂದೆ ಹೇಳಲಾದಂತೆ, ಇಲ್ಲಿ 1 ರಿಂದ 4ರ ವರೆಗಿನ ಪ್ರತಿವಾದಿಗಳು ವಾದಿಗಳ ವಾದವನ್ನು ರುಜುವಾತಾಗದ ಆಪಾದನೆಗಳಿಂದ ಹೊರತುಪಡಿಸಲಾಗಿದೆಯೆಂದು ರುಜುವಾತುಪಡಿಸಲಾಗಿದೆ. ಆದುದರಿಂದ ಹಿಂದೆ ಹೇಳಲಾದ ತೀರ್ಪುಗಳು ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯವಾಗುವುದಿಲ್ಲ.

15. ***ಕೃಷ್ಣ ಮೋಹನ್ ಕುಲ್ ಅಲಿಯಾಸ್ ನಾನಿ ಚರಣ್ ಕುಲ್*** (ಮೇಲಿನ) ಪ್ರಕರಣದಲ್ಲಿ, ಆಪಾದಿತ ವಿಲೇಖವನ್ನು ಮಾಡಿದ ಸಮಯದಲ್ಲಿ ಇತ್ಯರ್ಥ ವಿಲೇಖ ಮಾಡಿರುವುದು 100 ವರ್ಷಗಳಿಗಿಂತಲೂ ಹೆಚ್ಚಾಗಿತ್ತು. ಅವನು ಪಾರ್ಶ್ವವಾಯು ಪೀಡಿತನಾಗಿದ್ದು ಅವನ ಮಾನಸಿಕ ಮತ್ತು ದೈಹಿಕ ಸ್ಥಿತಿಯು ಸರಿಯಾಗಿರಲಿಲ್ಲ. ಅವನು ವಾಸ್ತವವಾಗಿ ಪಾರ್ಶ್ವವಾಯುವಿನಿಂದಾಗಿ ಹಾಸಿಗೆ ಹಿಡಿದಿದ್ದು, ಅವನ ಎಲ್‌ಟಿಎಮ್ (ಎಡ ಹೆಬ್ಬೆರಳಿನ ಗುರುತು) ಅನ್ನು ದಸ್ತಾವೇಜಿನಲ್ಲಿ ಲಗತ್ತಿಸಲಾಗಿತ್ತು, ಇದಕ್ಕೆ ಯಾವ ಸಾಕ್ಷಿದಾರನು ಸಾಕ್ಷ್ಯವಾಗಿಲ್ಲ. ಈ ಸ್ಥಿತಿಯಲ್ಲಿರುವಾಗ ವಿಲೇಖವು ಅನೂರ್ಜಿತ ಮತ್ತು ಅಸಿಂಧುವೆಂದು ಘೋಷಿಸಲಾಗಿತ್ತು. ಆ ಸಂದರ್ಭದಲ್ಲಿ,

ಪ್ರಯೋಜನವನ್ನು ನೀಡಿರುವ ವ್ಯಕ್ತಿಯ ವಯಸ್ಸು ಅಥವಾ ಸಾಮರ್ಥ್ಯ ಹಾಗೂ ಪ್ರಯೋಜನದ ಸ್ವರೂಪವು ತುಂಬಾ ಪ್ರಮುಖವಾದುದಾಗಿದೆ. ಅಂಥ ಪಕ್ಷಕಾರನು ನ್ಯಾಯಾಲಯದ ಮುಂದೆ ಪ್ರತಿವಾದಿಯಾಗಿರಲಿ ಅಥವಾ ವಾದಿಯಾಗಿರಲಿ ದಸ್ತಾವೇಜು ಸಂಗತಿಯನ್ನು ಗಣನೆಗೆ ತೆಗೆದುಕೊಳ್ಳದೆ ಎಲ್ಲಾ ಪ್ರಯೋಜನ ಅಥವಾ ಕ್ಲೇಮು ಹಕ್ಕುಗಳನ್ನು ದೊರಕಿಸಲು ಯುಕ್ತತೆಯನ್ನು ಅಥವಾ ಇಲ್ಲದಿದ್ದರೆ ವ್ಯವಹರಣೆಯನ್ನೂ ಸಹ, ಕಾನೂನಿಗನುಸಾರವಾಗಿ ದಸ್ತಾವೇಜಿನ ಯುಕ್ತ ನಿರ್ವಹಣೆಯನ್ನು ರುಜುವಾತುಪಡಿಸುವುದು ದೇಣಿಗೆದಾರ/ಫಲಾನುಭವಿ ಹೊಣೆಗಾರಿಕೆಯಾಗಿರುತ್ತದೆ. ಹೀಗಾಗಿ, ಸದರಿ ತೀರ್ಪನ್ನು ಪ್ರಸ್ತುತ ಪ್ರಕರಣದ ಸಂಗತಿಗಳಿಗೆ ಅನ್ವಯಿಸಲಾಗುವುದಿಲ್ಲ. ಏನನ್ನು ರುಜುವಾತುಪಡಿಸುವುದು ಅಗತ್ಯವಾಗಿದೆಯೆಂದರೆ, ಬರೆದುಕೊಟ್ಟವನು, ದಸ್ತಾವೇಜಿನ ಅಥವಾ ಅದರ ಒಳಾಂಶಗಳ ಸ್ವರೂಪವನ್ನು ಎಂದರೆ, ಬರೆದುಕೊಟ್ಟವನು ಮಾಡಿರುವುದು ಬರೀ ವಾಸ್ತವಿಕ ಕೃತ್ಯವಾಗಿದ್ದು, ಮಾನಸಿಕವಾಗಿ ಮಾಡಿರಲಿಲ್ಲ ಎಂಬುದಾಗಿರುತ್ತದೆ. ಅಂಥ ಸಾಕ್ಷ್ಯವನ್ನು ವಾದಿಗಳು ದಾಖಲೆಯಲ್ಲಿ ಇಟ್ಟಿಲ್ಲ. ಸುಮಾರು 50 ವರ್ಷ ವಯಸ್ಸಿನ 1ನೇ ಸಂಖ್ಯೆಯ ವಾದಿಯು ಅವಳ ಹೆಬ್ಬೆರಳ ಗುರುತು ಹಾಕಿದ್ದಾಳೆ ಹಾಗೂ ಸುಮಾರು 44 ವರ್ಷ ವಯಸ್ಸಿನ 2ನೇ ಸಂಖ್ಯೆಯ ವಾದಿಯು ನಿಶಾನೆ ಪಿ.10ರ ತ್ಯಾಗಪತ್ರದಲ್ಲಿ ಸಹಿಯನ್ನು ಹಾಕಿದ್ದಾರೆ. ವಾದಿಗಳು ನಿಶಾನೆ ಪಿ.1ನ್ನು ಬರೆದುಕೊಟ್ಟಿರುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಅವರ ಬಲವಂತದ ಮತ್ತು ಅನುಚಿತ ಪ್ರಭಾವ ಬಳಸಲಾಗಿದೆಯೆನ್ನುವ ಅವರ ವಾದವು ರುಜುವಾತಾಗಿರುವುದಿಲ್ಲ. ಇದಕ್ಕೆ ಪ್ರತಿಯಾಗಿ ಪ್ರತಿವಾದಿಗಳು, ಸಾಕ್ಷಿದಾರರು ದಸ್ತಾವೇಜಿನಲ್ಲಿ ಸೂಚಿಸಲಾದಂಥ ದಸ್ತಾವೇಜನ್ನು ಹಾಗೂ ಪರಿಗಣನೆಯ ವಿವರಣೆಯನ್ನು ರುಜುವಾತುಪಡಿಸಿದ್ದಾರೆ.

16. ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ನಿಯಮದ ಕ್ರಮಾದೇಶದೊಂದಿಗೆ ಓದಲಾದ 96ನೇ ಪ್ರಕರಣದ ಮೇರೆಗೆ ನ್ಯಾಯಾಲಯದ ಅಧಿಕಾರಕ್ಕೆ ಸಂಬಂಧಿಸಿದಂತೆ, ಮಾನ್ಯ ವಕೀಲರು, ***ಕೆ.ವಿ. ಲಕ್ಷ್ಮಣ್ ಮತ್ತು ಇತರರು (ಮೇಲಿನ)*** ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದು, ವ್ಯಾಜ್ಯಕಾರರ ಹಕ್ಕನ್ನು ಮೊದಲ ಅಪೀಲಿನಲ್ಲಿ ಸಂಗತಿಗಳು ಮತ್ತು ಕಾನೂನಿನ ಮೇಲೆ

ಆಲಿಸಬೇಕಾಗಿದ್ದು, ಅದನ್ನು ಅಂಗೀಕರಿಸುವ ಸಮಯದಲ್ಲಿನ ಕನಿಷ್ಠ ಮಿತಿಯಲ್ಲಿ ಹಸ್ತಾಂತರ ಮಾಡಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ಮೊದಲ ಅಪೀಲಿನ ಹಕ್ಕು, ವ್ಯಾಜ್ಯಕಾರನ ಮೌಲ್ಯಯುತ ಕಾನೂನು ಹಕ್ಕು ಎಂಬುದು ಸರ್ವೇ ಸಾಮಾನ್ಯವಾದುದು. ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗಿನ ಅಪೀಲನ್ನು ಡಿಕ್ರಿ ಮೂಲಕ ಮಾತ್ರ ಹೂಡಲಾಗುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲುಗಳನ್ನು ಪರಿಗಣಿಸುವುದಕ್ಕೆ ಸಂಬಂಧಿಸಿದ ಪ್ರಕ್ರಿಯೆಯನ್ನು ವಿವರಿಸುತ್ತದೆ. ಮಾನ್ಯ ಉಚ್ಚ ನ್ಯಾಯಾಲಯ ನಿಯಮಗಳು, 1959 ಉಚ್ಚ ನ್ಯಾಯಾಲಯವು ಅನುಸರಿಸಬೇಕಾದ ಪದ್ಧತಿ ಮತ್ತು ಪ್ರಕ್ರಿಯೆಯನ್ನು ಉದ್ದೇಶಿಸುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 11ನೇ ನಿಯಮವು ಕೆಳ ನ್ಯಾಯಾಲಯಗಳಿಗೆ ಯಾವುದೇ ಸೂಚನೆ ಕಳುಹಿಸದೆ ಅಪೀಲನ್ನು ವಜಾಗೊಳಿಸುವ ಅಧಿಕಾರವಿರುವುದನ್ನು ಕುರಿತದ್ದಾಗಿದೆ. 11ನೇ ನಿಯಮದ (4)ನೇ ಉಪ–ನಿಯಮವನ್ನು, ತಿದ್ದುಪಡಿ ಅಧಿನಿಯಮ ಸಂಖ್ಯೆ.1976ರ 104ರ ಪ್ರಕಾರ ದಿನಾಂಕ: 1.2.1977ರಿಂದ ಪರಿಣಾಮಕಾರಿಯಾಗುವಂತೆ ಸೇರಿಸಲಾಗಿದೆ. 11ನೇ ನಿಯಮವನ್ನು ಹೀಗೆ ಓದಲಾಗಿದೆ:

> *“11. **ಅಧೀನ ನ್ಯಾಯಾಲಯದ ಗಮನಕ್ಕೆ ತರದೆ ಅಪೀಲನ್ನು ವಜಾಗೊಳಸುವ ಅಧಿಕಾರ.**– (1) ಅಪೀಲು ನ್ಯಾಯಾಲಯವು, ಅಪೀಲುದಾರ ಅಥವಾ ಅವರ ಪ್ಲೀಡರನ ಸುನಾವಣೆಗೆ ದಿನವನ್ನು ನಿಗದಿಪಡಿಸಿದ ನಂತರ ಮತ್ತು ಆ ದಿನದಂದು ಅವನು ಹಾಜರಾದರೆ ತದನುಸಾರವಾಗಿ ಅವನನ್ನು ಸುನಾವಣೆ ಮಾಡಿ ಅಪೀಲನ್ನು ವಜಾಗೊಳಿಸಬಹುದು.*
>
> *(2) ಯಾವ ದಿನಕ್ಕೆ ಸುನಾವಣೆಯನ್ನು ನಿಗದಿಗೊಳಿಸಲಾಗಿದೆಯೋ ಆ ದಿನದಂದು ಅಥವಾ ಮುಂದೂಡಬಹುದಾದ ಯಾವುದೇ ಇತರ ದಿನದಂದು ಅಪೀಲುದಾರನು ಹಾಜರಾಗದಿದ್ದರೆ, ಅಪೀಲನ್ನು*

*ಸುನಾವಣೆಗೆ ಕರೆದಾಗ, ನ್ಯಾಯಾಲಯುವು ಆ ಅಪೀಲನ್ನು ವಜಾಗೊಳಿಸಿರುವ ಆದೇಶವನ್ನು ಮಾಡಬಹುದು.*

*(3) ಈ ನಿಯಮದ ಮೇರೆಗೆ ಮಾಡಿದ ಅಪೀಲಿನ ವಜಾವಟ್ಟನ್ನು, ಯಾರ ಡಿಕ್ರಿಯಿಂದ ಅಪೀಲನ್ನು ಹೂಡಲಾಗಿತ್ತೋ ಆ ನ್ಯಾಯಾಲಯಕ್ಕೆ ಅಧಿಸೂಚಿಸತಕ್ಕದ್ದು.*

*(4) ಉಚ್ಚ ನ್ಯಾಯಾಲಯವಾಗದಿರುವ ಅಪೀಲು ನ್ಯಾಯಾಲಯವು, (1)ನೇ ಉಪ–ನಿಯಮದ ಮೇರೆಗೆ ಅಪೀಲನ್ನು ವಜಾಗೊಳಿಸಿದಲ್ಲಿ, ಇದು, ಹಾಗೆ ಮಾಡುವುದಕ್ಕೆ ಸಂಬಂಧಿಸಿದ, ಅದರ ಆಧಾರಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿ, ತೀರ್ಪನ್ನು ಹೊರಡಿಸತಕ್ಕದ್ದು ಮತ್ತು ತೀರ್ಪಿಗನುಸಾರವಾಗಿ ಡಿಕ್ರಿಯನ್ನು ರೂಪಿಸತಕ್ಕದ್ದು".*

ಉಚ್ಚ ನ್ಯಾಯಾಲಯವಾಗಿರದ ಅಪೀಲು ನ್ಯಾಯಾಲಯವು, ಸದರಿ ನಿಯಮದ ಮೇರೆಗೆ ಅಪೀಲನ್ನು ವಜಾಗೊಳಿಸುವುದಕ್ಕೆ ಸಂಬಂಧಿಸಿದ ಆಧಾರಗಳನ್ನು ಸಂಕ್ಷಿಪ್ತವಾಗಿ ದಾಖಲಿಸಿದ ತೀರ್ಪನ್ನು ಒಪ್ಪಿಸುವುದು ಅದರ ಹೊಣೆಗಾರಿಕೆಯಾಗಿರುತ್ತದೆ. ಆದಾಗ್ಯೂ, ಮಾನ್ಯ ಸರ್ವೋಚ್ಚ ನ್ಯಾಯಲಯ ಹಾಗೂ ಉಚ್ಚ ನ್ಯಾಯಾಲಯಗಳು ವಿಧಿಸಿದ ತೀರ್ಪುಗಳ ಮಾಲೆಯು, ಅಂಗೀಕರಿಸುವ ಹಂತದಲ್ಲಿ ಅಪೀಲನ್ನು ವಜಾಗೊಳಿಸಿರುವ ಸಂಬಂಧ ಸಂಕ್ಷಿಪ್ತವಾಗಿ ಅದರ ಕಾರಣಗಳನ್ನು ದಾಖಲಿಸಲು ಉಚ್ಚ ನ್ಯಾಯಾಲಯಕ್ಕೆ ಒತ್ತಿ ಹೇಳಿವೆ. ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ವಾದಗಳನ್ನು, ಐಎಲ್‌ಆರ್ 2015 ಕೆಎಆರ್ 2809ರಲ್ಲಿ ವರದಿಯಾದ ***ಶ್ರೀ ಟಿ.ಎಸ್. ಚನ್ನೇಗೌಡ –ವಿರುದ್ಧ– ಶ್ರೀ ಎಚ್. ತೋಪಯ್ಯ ಮತ್ತು ಮತ್ತೊಬ್ಬರು***[6] ಪ್ರಕರಣದಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಪರಿಗಣಿಸಿ ತಿಳಿಸಿದ್ದು, ಇದರಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

6. ಐಎಲ್‌ಆರ್ 2015 ಕೆಎಆರ್ 2809

*"36.ಸಿವಿಲ್ ಪ್ರಕ್ರಿಯಾ ಸಂಹಿತೆಯ 41ನೇ ಕ್ರಮಾದೇಶದ 11ನೇ ನಿಯಮದ (4)ನೇ ಉಪ–ನಿಯಮದ ಉಪಬಂಧದಲ್ಲಿ ಏನೇ ಒಳಗೊಂಡಿದ್ದರೂ, ಉಚ್ಚ ನ್ಯಾಯಾಲಯವು, ನ್ಯಾಯವನ್ನು ಮಾಡಲಾಗಿದೆ ಅಷ್ಟೇ ಅಲ್ಲ, ಮಾಡಲಾಗಿದೆಯೆಂಬುದು ಕಂಡು ಬರುತ್ತದೆಯೆಂಬುದನ್ನು ಖಚಿತಪಡಿಸಲು ಎದುರುದಾರರ ಗೈರಿನಲ್ಲಿ ಒಪ್ಪಿಕೊಳ್ಳುವ ಹಂತದಲ್ಲಿ ಸುನಾವಣೆಯ ಮೊದಲ ದಿನದಂದು ಅಪೀಲನ್ನು ವಜಾಗೊಳಿಸಿದ್ದರೂ, ಯುಕ್ತ ಆದೇಶವನ್ನು ಹೊರಡಿಸುವುದನ್ನು ನಿರೀಕ್ಷಿಸಲಾಗಿದೆ. 41ನೇ ಕ್ರಮಾದೇಶದ 11(4)ನೇ ನಿಯಮದಲ್ಲಿನ ಉಪಬಂಧಗಳು, ಪರಸ್ಪರ ಪಕ್ಷಕಾರರ ಹಕ್ಕುಗಳನ್ನು ಮತ್ತು ಹೊಣೆಗಾರಿಕೆಗಳನ್ನು ನಿರ್ಣಹಿಸುವಲ್ಲಿ ನ್ಯಾಯ ಮಾಡುವ ಅದರ ಮೂಲ ಹೊಣೆಗಾರಿಕೆಗಳೊಂದಿಗೆ ದೂರವಿರುವುದಿಲ್ಲ. ಕನಿಷ್ಠ ಮಿತಿಯಲ್ಲಿ ಅಪೀಲನ್ನು ವಜಾಗೊಳಿಸಿದಾಗ, ಪ್ರಾಥಮಿಕ ಹಂತದಲ್ಲಿ ವಜಾಗೊಳಿಸಿರುವುದಕ್ಕೆ ಕಾರಣಗಳನ್ನು ನೀಡುವ ಸಂಕ್ಷಿಪ್ತ ಆದೇಶವನ್ನು ಬದಲಾಯಿಸದೆ ದಾಖಲಿಸಬೇಕು. 11ನೇ ನಿಯಮದ (4)ನೇ ಉಪ–ನಿಯಮಕ್ಕೆ ಅನುಸಾರವಾಗಿ 'ಆಧಾರಗಳನ್ನು' 'ಸಂಕ್ಷಿಪ್ತವಾಗಿ ದಾಖಲಿಸಿದ್ದರೂ, 'ಆಧಾರಗಳಿಗೆ ಸಂಬಂಧಪಡುತ್ತವೆ. ವಾದಪತ್ರ ಅಥವಾ ಲಿಖಿತ ಹೇಳಿಕೆಯಲ್ಲಿ ಮತ್ತು ಅಪೀಲಿನ ವಿವರಣಪತ್ರದಲ್ಲಿ ಮಾಡಲಾದ ವಾದಗಳನ್ನು ವಿಲೆ ಮಾಡಲಾಗುತ್ತದೆ. ವಕೀಲರು ಮೌಖಿಕವಾಗಿ ಒತ್ತಿ ಹೇಳಲಾದ ವಾದ ಮತ್ತು ಅದರ ವಿಲೆಯನ್ನು ತೀರ್ಪಿನ ಮುಖ್ಯಭಾಗದಲ್ಲಿ ವಿಶದಪಡಿಸಬೇಕು. (4)ನೇ ಉಪ–ನಿಯಮದ ಕಾನೂನಾತ್ಮಕ ಉದ್ದೇಶ, ವಿವೇಚನಾಶೀಲ, ಯುಕ್ತ ಹಾಗೂ ಗಣನೆ ಮಾಡಬಹುದಾದ ನ್ಯಾಯ ನೀಡುವ ಪ್ರಕ್ರಿಯೆ ರೂಪಿಸುವುದು ಹಾಗೂ ಸಕಾರಣ ಆದೇಶದ ಮೂಲಕ ಸಂಚಾರಿ ವ್ಯಾಜ್ಯಕಾರಕ ಪ್ರಕ್ರಿಯೆಯನ್ನು ಸಂಕ್ಷಿಪ್ತಗೊಳಿಸುವುದು ಹಾಗೆಯೇ, ಯಶಸ್ವಿಯಾಗದ ಅಪೀಲುದಾರನನ್ನು, ಅವನ/ಅವಳ ವಾದದ ಗುಣಾವಗುಣಗಳನ್ನು ತಿಳಿದುಕೊಳ್ಳಲು ಒಂದು ಸ್ಥಾನದಲ್ಲಿಡಬೇಕು*

ಮತ್ತು ತೀರ್ಪನ್ನು ಒಪ್ಪಿಕೊಳ್ಳಲು ಅಥವಾ ಉನ್ನತ ವೇದಿಕೆಯಲ್ಲಿ ಅದನ್ನು ಪ್ರಶ್ನಿಸಲು ಅವನ/ಅವಳ ವಿವೇಚನೆಯನ್ನು ಬಳಸುವ ಸ್ಥಿತಿಯಲ್ಲಿರಿಸಬೇಕು.

*37. "ಹಾಗೆ ಮಾಡಲು ಅದು ಸೂಕ್ತವೆಂದು ಭಾವಿಸಿದರೆ, ದಾಖಲಿಸಲು ಕಳುಹಿಸುವುದು" ಇದನ್ನು ಬಿಟ್ಟುಬಿಡಲಾಗಿದೆ. ಸದೃಶವಾಗಿ, ಯಾರ ಡಿಕ್ರಿಯಿಂದ ಅಪೀಲನ್ನು ಹೂಡಲಾಗಿದೆಯೋ ಅವರಿಂದ ನ್ಯಾಯಾಲಯಕ್ಕೆ ಸೂಚನೆಯನ್ನು ನೀಡದಿರುವುದು ಹಾಗೂ ಎದುರುದಾರ ಅಥವಾ ಅದರ ಪ್ಲೀಡರನಿಗೆ ನೋಟೀಸನ್ನು ಹೊರಡಿಸಿದೆ" ಎಂಬುದನ್ನು ಸಹ ಬಿಟ್ಟುಬಿಡಲಾಗಿದೆ. ಆದುದರಿಂದ ಶಾಸನದ ಉದ್ದೇಶವು ಸುಸ್ಪಷ್ಟವಾಗಿದೆ. ಪ್ರಕರಣಗಳ ಕ್ಷಿಪ್ರ ವಿಲೇವಾರಿಯ ಕಾರ್ಯನೀತಿಯೊಂದಿಗೆ ಇದು ಹೊಂದಿಕೊಂಡಿದೆ. ಯಾರ ಡಿಕ್ರಿಯಿಂದ ಅಪೀಲನ್ನು ಹೂಡಲಾಗಿದೆಯೋ ಅವರ ನ್ಯಾಯಾಲಯಕ್ಕೆ ದಾಖಲೆ ಕಳುಹಿಸುವುದು, ನೋಟೀಸನ್ನು ಕಳುಹಿಸುವುದು ಮತ್ತು ಎದುರುದಾರನಿಗೆ ಅಥವಾ ಅವನ ಪ್ಲೀಡರನಿಗೆ ನೋಟೀಸನ್ನು ಹೊರಡಿಸುವುದು ಗಣನೀಯ ಸಮಯುವನ್ನು ಒಳಗೊಂಡಿರುತ್ತದೆ. ಅಪೀಲಿನಲ್ಲಿ ನಿಜವಾಗಿ ಯಾವುದೇ ಗುಣಾರ್ಹತೆಗಳಿಲ್ಲದಿದ್ದ ಸಂದರ್ಭಗಳಲ್ಲಿ ಮತ್ತು ದಾಖಲೆಗಳಿಲ್ಲದೆ, ಎದುರುದಾರ ಮತ್ತು ಅವನ ಪ್ಲೀಡರನನ್ನು ಸುನಾವಣೆ ಮಾಡದೆ, ಅಪೀಲನ್ನು ವಜಾಗೊಳಿಸಬಹುದಾಗಿದೆ. ಹೀಗಾಗಿ ನ್ಯಾಯಾಲಯುದ ಕಡೆಗಿರುವ ಹಿಂದೆ ಹೇಳಲಾದ ಹೊಣೆಗಾರಿಕೆಯನ್ನು ಇದರಿಂದ ದೂರ ಮಾಡಲಾಗಿದೆ.*

*42. ಆದುದರಿಂದ, ನಿರ್ದಿಷ್ಟವಾಗಿ, ಪರಿನಿಯಮವು, ಉಚ್ಚ ನ್ಯಾಯಾಲಯ ಮಟ್ಟ ಹಾಗೂ ಅಧೀನ ಅಪೀಲು ನ್ಯಾಯಾಲಯ ಮಟ್ಟದಿಂದಲೂ ಕೂಡ ಅಪೀಲಿನ ಅಂಗೀಕಾರದ ಹಂತವನ್ನು*

*ಉಪಬಂಧಿಸುತ್ತದೆ. ಈ ಉಪಬಂಧವನ್ನು ಎಲ್ಲಿಯೂ ಸೂಚಿಸಿಲ್ಲ ಅಥವಾ ಪದ್ಧತಿಯಲ್ಲೂ ಇಟ್ಟುಕೊಂಡಿಲ್ಲ. ಇದಕ್ಕೆ ವಿರುದ್ಧವಾಗಿ ಇದನ್ನು ಉಲ್ಲಂಘಿಸಲಾಗಿದೆ. ಇದೊಂದು ಉಪಬಂಧವಾಗಿದ್ದು, ಇದನ್ನ ನಿಯತ ಮೊದಲನೇ ಅಪೀಲಿನಲ್ಲಿ ನ್ಯಾಯಾಧೀಶರು ಕ್ಷಿಪ್ರ ನ್ಯಾಯಿಕ ಹಸ್ತಕ್ಷೇಪವನ್ನು ಮಾಡುವ ಸಂಬಂಧ ಸಂಸತ್ತು ಇದನ್ನು ಅಧಿನಿಯಮಿಸಿದೆ. ನ್ಯಾಯಾಲಯಗಳ ಕ್ಷಿಪ್ರ ನ್ಯಾಯಿಕ ಪದ್ಧತಿಯ ಕೊರತೆಯ ಕಾರಣದಿಂದ ಇದನ್ನು ರೂಪಿಸಲಾಗಿದೆ. ಈ ಬಗೆಯ ಅಪೀಲುಗಳ ವಿಲೇವಾರಿಯಲ್ಲಿ ಮಿತಿಮೀರಿದ ವಿಳಂಬವಾಗಿದ್ದು, ಸಾಮಾನ್ಯವಾಗಿ ಇವುಗಳು ಇತ್ಯರ್ಥಗೊಳ್ಳಲು ಐದರಿಂದ ಹತ್ತು ವರ್ಷಗಳ ಅವಧಿಯನ್ನು ತೆಗೆದುಕೊಳ್ಳುತ್ತವೆ. ಈ ಹಂತದಲ್ಲಿ ಅಪೀಲು ನ್ಯಾಯಾಲಯವು ಏನನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು ಎಂದರೆ, ಅಧಿವಿಚಾರಣಾ ನ್ಯಾಯಾಲಯದಲ್ಲಿ, ವಾದಿಯು ತನ್ನ ವಾದವನ್ನು ವಿವರವಾಗಿ ಮಂಡಿಸಲು ಅವಕಾಶವನ್ನು ನೀಡಬೇಕಾಗುತ್ತದೆ. ಪ್ರತಿವಾದಿಯು, ಲಿಖಿತ ವಿವರಣೆಯನ್ನು ಸಲ್ಲಿಸುವ ಮೂಲಕ ವಾದಿಯ ಮೊಕದ್ದಮೆಯನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ ವಿವಾದಾಂಶಗಳನ್ನು ರೂಪಿಸಲಾಗಿದೆ. ಎರಡೂ ಕಡೆಯ ಸಾಕ್ಷಿದಾರರನ್ನು ವಿಚಾರಣೆ ಮಾಡಿ, ದೀರ್ಘವಾಗಿ ಪಾಟೀ ಸವಾಲನ್ನು ನಡೆಸಲಾಗಿದೆ; ಹಲವಾರು ಸಂದರ್ಭಗಳಲ್ಲಿ ಅವರನ್ನು ಪುನಃ ಕರೆಸಿ ಸುದೀರ್ಘವಾಗಿ ಮರು ವಿಚಾರಣೆ ಮಾಡಲಾಗಿದೆ. ಕಮೀಷನ್‌ಗಳನ್ನು ಆದೇಶಿಸಲಾಗಿದೆ. ತಜ್ಞ ಸಾಕ್ಷ್ಯವನ್ನು ಪಡೆದುಕೊಳ್ಳಲಾಗಿದೆ. ಕಮೀಷನ್‌ನವರ ವರದಿಯನ್ನು ಪಡೆಯಲಾಗಿದೆ. ತರುವಾಯ, ಪರಿನಿಯಮದ ಉಪಬಂಧಗಳನ್ನು, ಅಲ್ಲದೆ ಈ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದ್ಧರಿಸಿ ಸುದೀರ್ಘ ವಾದವನ್ನು ಮಂಡಿಸಲಾಗಿದೆ. ತದನಂತರ ಮಾನ್ಯ ನ್ಯಾಯಾಧೀಶರು, ಕಠಿಣತರ ಕದನ ರೀತಿಯ ಅಧಿವಿಚಾರಣೆಯನ್ನು ನಡೆಸಿದ ನಂತರ, ಎಲ್ಲಾ ವಿವಾದಗಳಿಗೆ*

*ಸಂಬಂಧಿಸಿದ ತೀರ್ಪನ್ನು ಘೋಷಿಸಲು ಸರಿ ಸುಮಾರು ಹತ್ತು ವರ್ಷಗಳ ಹೆಚ್ಚಿನ ಅವಧಿಯನ್ನು ತೆಗೆದುಕೊಂಡಿದ್ದಾರೆ. ನ್ಯಾಯಾಂಗದ ಒಬ್ಬ ಸದಸ್ಯನ ಅಮೂಲ್ಯವಾದ ನ್ಯಾಯಿಕ ಸಮಯವನ್ನು ಈ ನ್ಯಾಯನಿರ್ಣಯ ಪ್ರಕ್ರಿಯೆಯಲ್ಲಿ ಕಳೆಯಬೇಕಾಗುತ್ತದೆ. ಶಾಸನಬದ್ಧ ಅಪೀಲನ್ನು ಉಪಬಂಧಿಸುವ ಉದ್ದೇಶ, ಪ್ರಕರಣಗಳನ್ನು ನಿರ್ಧರಿಸುವಲ್ಲಿ ನ್ಯಾಯಾಧೀಶರು ತಪ್ಪೆಸಗಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದಾಗಿದೆ. ಆ ದೋಷಗಳನ್ನು ಸರಿಪಡಿಸುವ ವ್ಯವಸ್ಥೆ ಇರಬೇಕಾಗುತ್ತದೆ. ಆದುದರಿಂದ, ಅಪೀಲಿನ ಶಾಸನಬದ್ಧ ಹಕ್ಕನ್ನು ಉಪಬಂಧಿಸಲಾಗಿದೆ. ಹಾಗೆಂದು ಪ್ರತಿಯೊಂದು ಪ್ರಕರಣದಲ್ಲಿ, ಅಪೀಲನ್ನು ಒಪ್ಪಿಕೊಳ್ಳಬೇಕು ಮತ್ತು ಐದು ವರ್ಷಗಳ ಅವಧಿಯವರೆಗೆ ತಣ್ಣಗೆ ಸಂಗ್ರಹಣೆಯಲ್ಲಿಡಬೇಕು. ಆ ನಂತರ ನಿರ್ಧರಿಸಬೇಕು ಎಂಬುದು ಇದರ ಅರ್ಥವಲ್ಲ. ಪರಿನಿಯಮವು ಏನನ್ನು ಕಡ್ಡಾಯಗೊಳಿಸುತ್ತದೆ ಎಂದರೆ, ಅಪೀಲನ್ನು ಅಂಗೀಕರಿಸುವ ಹಂತದಲ್ಲಿ ಮಾನ್ಯ ನ್ಯಾಯಾಧೀಶರು, ತಮ್ಮ ವಿವೇಚನೆ ಬಳಸಿ, ವಕೀಲರ ಪರಿಷತ್ತಿನ ಸದಸ್ಯರ ಕಡೆಯಿಂದ ತೀರ್ಪಿನಲ್ಲಿ ಯಾವ ದೋಷವಾಗಿದೆ ಎಂಬ ಬಗ್ಗೆ ಮತ್ತು ಅವರ ಅಪಾರ ಅನುಭವದಿಂದ ದೋಷವನ್ನು ಗುರುತಿಸಿದಾಗ, ಅವರು, ತೀರ್ಪಿನಲ್ಲಿ ಗುರುತಿಸಲಾದಂಥ ದೋಷವನ್ನು ಪರಿಗಣಿಸಬಹುದು ಹಾಗೂ ಯಾವುದಾದರೂ ವಾಸ್ತವಾಂಶವಿದೆಯೇ ಎಂಬುದನ್ನು ಗುರುತಿಸಬಹುದು. ವಾದದಲ್ಲಿ ಯಾವುದೇ ವಾಸ್ತವಾಂಶ ಇಲ್ಲದಿದ್ದರೆ, ಅಪೀಲನ್ನು ಸುನಾವಣೆಗೆ ಅಂಗೀಕರಿಸುವ ಪ್ರಶ್ನೆಯೇ ಬರುವುದಿಲ್ಲ. ಅಂಥ ಕೇವಲ ಯಾಂತ್ರಿಕ ಒಪ್ಪಿಗೆಯ ಕಾರಣದಿಂದ, ಇಂದು, ಯಾವುದೇ ಗುಣಾರ್ಹತೆಯಿಲ್ಲದಿದ್ದರೂ ಕೂಡ ಅಪೀಲನ್ನು ಸಲ್ಲಿಸಲು ವ್ಯಾಜ್ಯಕಾರರನ್ನು ಉತ್ತೇಜಿಸಲಾಗುತ್ತದೆ. ಕಾರಣವು ಸುಸ್ಪಷ್ಟವಾಗಿದೆ. ಪ್ರಸ್ತುತ ನ್ಯಾಯಿಕ ಪ್ರಕ್ರಿಯೆಯು, ಇತರರಿಗೆ ಸೇರಿದ ಸ್ವತ್ತನ್ನು*

ಮತ್ತು ಹಣವನ್ನು ಅನುಭವಿಸುವುದು ಹಗುರವಾಗುವಂತೆ ಮಾಡಿದೆ. ಕಠಿಣತೆರನಾದ ಕದನ ಸಮರ ನಡೆಸಿದ ನಂತರ ಹಣವನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದ ದಾವೆಯಲ್ಲಿ, ವಾದಿಗೆ ಸೇರಿದ ಹಣವು ಪ್ರತಿವಾದಿಯ ಕೈಯ್ಯಲ್ಲಿರುವುದಕ್ಕೆ ಡಿಕ್ರಿಯನ್ನು ಹೊರಡಿಸಲಾಗಿದೆ. ಅವನು ಹಣವುಳ್ಳ ವ್ಯವಹಾರಸ್ಥ ಮನುಷ್ಯನಾಗಿದ್ದರೆ, ಅವನು ಹಣವನ್ನು ದ್ವಿಗುಣಗೊಳಿಸಿಕೊಳ್ಳುವನು ಕೊನೆಯಲ್ಲಿ, ಐದು ವರ್ಷ ಅಥವಾ ಹತ್ತು ವರ್ಷಗಳ ನಂತರ ಅವನು ಆ ಹಣವನ್ನು ಮರು ಸಂದಾಯ ಮಾಡುವುದಕ್ಕೆ ಲೆಕ್ಕಕ್ಕೆ ಇಟ್ಟುಕೊಂಡಿರುವುದಿಲ್ಲ. ಸ್ವಾಧೀನತೆ ಅಥವಾ ನಿರಾಕರಿಸಿದ ಬಾಕಿಗೆ ಸಂಬಂಧಿಸಿದ ದಾವೆಯಲ್ಲಿ, ಅದರ ಸಂಬಂಧದಲ್ಲಿ ಅವನು ಡಿಕ್ರಿಯಿಂದ ಪರಿತಪಿಸುವನು. ಏಕೆಂದರೆ, ಅತ್ಯಲ್ಪ ಬಾಡಿಗೆಯಲ್ಲಿ ಮೊದಲಿನ ಸಮಯದಲ್ಲಿ ಸ್ವಾಧೀನತೆಯನ್ನು ಹೊಂದಿರುವನು. ಅಪೀಲು, ಅವನನ್ನು ಮುಂದುವರಿಯಲು ಮತ್ತು ಸ್ವತ್ತನ್ನು ಅನುಭೋಗಿಸಲು ಸಮರ್ಥಗೊಳಿಸುತ್ತದೆ. ಹೀಗಾಗಿ, ಡಿಕ್ರಿಧಾರಕ – ವಾದಿಯು ಸ್ವತ್ತಿನ ಸ್ವಾಧೀನವನ್ನು ಅನುಭವಿಸುವುದರಿಂದ ವಂಚಿತನಾಗಿರುವನು, ಕೆಲವು ಸಮಯದಲ್ಲಿ ಅವನ ಜೀವನಾವಧಿಯಲ್ಲಿ ಸ್ವತ್ತನ್ನು ಅನುಭವಿಸುವುದರಿಂದ ವಂಚಿತನಾಗುವನು. ವಿಭಾಗಿತ ದಾವೆಗಳ ಸಂದರ್ಭದಲ್ಲಿ, ಸಂಬಂಧಗಳನ್ನು ಒಪ್ಪಿಕೊಂಡಿದ್ದಲ್ಲಿ ಹಾಗೂ ಸ್ವತ್ತಿನ ಸ್ವರೂಪವನ್ನು ಒಪ್ಪಿಕೊಂಡಿದ್ದಲ್ಲಿ ಮತ್ತು ಪ್ರಾಥಮಿಕ ಡಿಕ್ರಿಯ ವಿರುದ್ಧ ಅಪೀಲುಗಳನ್ನು ಸಲ್ಲಿಸಿದ್ದರೆ, ಪ್ರತಿವಾದಿಗಳು, ಕುಟುಂಬಕ್ಕೆ ಸೇರಿದ ಸ್ವತ್ತಿನ ಅನುಭೋಗದಲ್ಲಿರುತ್ತಾರೆ. ಸಾಮಾನ್ಯವಾಗಿ ವಾದಿಯು, ಒಬ್ಬ ವ್ಯಕ್ತಿಯಾಗಿದ್ದು, ಸ್ವತ್ತಿನ ಅನುಭೋಗದಿಂದ ಹೊರಗುಳಿದಿರುವನು. ಕೆಲವು ವೇಳೆ, ವಾದಿಯು, ತನ್ನ ಜೀವಿತಾವಧಿಯ ಅವಧಿಯಲ್ಲಿ ಡಿಕ್ರಿಯ ಫಲವನ್ನು ಕಾಣಲಾಗದಿರಬಹುದು. ಸದೃಶವಾಗಿ, ದಾಖಲೆಯ ನೆರವಿಲ್ಲದೆಯೂ ಕ್ಷಿಪ್ರ ವಿಲೇವಾರಿಗೆ ಅನುಮತಿಸಬಹುದು, ಪಕ್ಷಕಾರರು

*ಹಾಜರುಪಡಿಸಿದ ಸಾಕ್ಷಿಯು ಅವಗಾಹನೆಯು ಅನಗತ್ಯವಾಗಿದೆಯೆಂದು ಹಾಗೆಯೇ ಅಪೀಲಿನಲ್ಲಿ ನ್ಯಾಯ ನಿರ್ಣಯದ ಸಂಬಂಧ ಉದ್ಭವಿಸಿದ ಪ್ರಶ್ನೆಗಳ ಸಂದರ್ಭದಲ್ಲಿ ಮಾತ್ರ ಅನುಭವಿಸಬಹುದು. ಸದೃಶವಾಗಿ, ಒಳಗೊಂಡ ಪ್ರಶ್ನೆಯು ಕಾನೂನಿನ ಸ್ಪಷ್ಟ ಪ್ರಶ್ನೆಯಾಗಿದ್ದರೆ ಮೊದಲನೆಯದಾಗಿ ನ್ಯಾಯಾಲಯವು ತೆಗೆದುಕೊಂಡ ದೃಷ್ಟಿಯು ತುಂಬಾ ವಿಶೇಷವಾಗಿಲ್ಲದುದಾಗಿದ್ದು, ಆ ದೃಷ್ಟಿಯು, ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ಮೊದಲಿನ ತೀರ್ಪನ್ನು ಆಧರಿಸಿದ್ದರೆ ಮತ್ತು ಅಪೀಲು ನ್ಯಾಯಾಲಯಕ್ಕೆ ಹಿಂದೆ ಹೇಳಲಾದ ಕಾನೂನಿಗಿಂತ ವಿಭಿನ್ನವಾದ ಯಾವುದೇ ಕಾರಣ ಕಂಡು ಬಂದಾಗ, ವಜಾಗೊಳಿಸುವ ಆದೇಶ ಹೊರಡಿಸಬಹುದಾದ ಆದೇಶ ಮಾತ್ರವಾಗಿರುತ್ತದೆ. ಸದೃಶವಾಗಿ, ವಿಲೇವಾರಿಯು, ಸಂಗತಿಗಳು ವಿವಾದದಿಂದ ಕೂಡಿರದಿದ್ದಲ್ಲಿ ಅಥವಾ ಮೊದಲಿಗೆ ನಿರ್ಣಯಗಳ ಸರಿತನವು ನ್ಯಾಯಾಲಯವು ದಾಖಲಿಸಿದ ಸಂಗತಿಯ ಪ್ರಶ್ನೆ ಆಧರಿಸಿದ್ದಲ್ಲಿ ಅಪೀಲಿನಲ್ಲಿ ಆಕ್ಷೇಪಿಸಿರುವುದಿಲ್ಲ. ಅಪೀಲಿನಲ್ಲಿಯೂ ಕೂಡ ತರುವಾಯ ಯಾವುದೇ ಅವಕಾಶವಿಲ್ಲವೆನ್ನುವ ಸಂಗತಿಯ ಪರಿಜ್ಞಾನವಿರುವ ದಾವೆಯಲ್ಲಿ ಯಶಸ್ವಿಯಾಗದ ಪಕ್ಷಕಾರನು ಅವನಿಗೆ ಲಭ್ಯವಿರುವ ಅನುಕೂಲವನ್ನು ಪಡೆದುಕೊಳ್ಳಲು ನ್ಯಾಯಿಕ ಪದ್ಧತಿಯ ಕಾರ್ಯದ ಕಾರಣದಿಂದ ಇನ್ನೂ ಅಪೀಲನ್ನು ಹೂಡುವನು. ಪರಿಷತ್ತಿನ ಸದಸ್ಯರೂ ಕೂಡ ಅವರ ಜವಾಬ್ದಾರಿಯನ್ನು ಅರಿತುಕೊಂಡು, ಪ್ರಕರಣಗಳನ್ನು ತ್ವರಿತವಾಗಿ ವಿಲೇ ಮಾಡಲು ಬಯಸಿದರೆ ಅವರು ಸಂಸತ್ತು ಅಧಿನಿಯಮಿಸಿದ ಉಪಬಂಧಗಳನ್ನು ಜಾರಿಗೊಳಿಸುವ ಸಲುವಾಗಿ ಪರಿಣಾಮಕಾರಿಯಾಗಿ ತಮ್ಮ ಪಾತ್ರವನ್ನೂ ಸಹ ನಿರ್ವಹಿಸಬೇಕು".*

17. ಮೊದಲ ಅಪೀಲು ಕಾನೂನು ನಿರ್ಬಂಧಪಡಿಸಿದ ಹೊರತಾಗಿಯೂ ಪಕ್ಷಕಾರರ ಮೌಲ್ಯಯುತ ಹಕ್ಕಾಗಿದೆಯೆಂಬುದು ಸುಸ್ಥಾಪಿತವಾದ ಕಾನೂನಾಗಿದೆ, ಇದರಲ್ಲಿರುವ ಸಂಪೂರ್ಣ ವಾದವು, ಎಲ್ಲಾ ವಿವಾದಾಂಶಗಳು ಮತ್ತು ಸಾಕ್ಷಿಯನ್ನು ವ್ಯವಹರಿಸಲು ಮೊದಲ ಅಪೀಲಿನ ನ್ಯಾಯಾಲಯ ಮುಕ್ತವಾಗಿರುತ್ತದೆ ಮತ್ತು ಸಂಗತಿಗಳ ಪ್ರಶ್ನೆಗಳು ಮತ್ತು ಕಾನೂನಿಗೆ ಸಂಬಂಧಿಸಿದ ಎರಡೂ ರೀತಿಯ ಪ್ರಶ್ನೆಗಳನ್ನು ಆಲಿಸಲು ಹಕ್ಕುಳ್ಳವರಾಗಿರುವರು. ಆದಾಗ್ಯೂ, ಮೊದಲ ಅಪೀಲನ್ನು, ಕನಿಷ್ಠ ಪರಿಮಿತಿಯಲ್ಲಿ ಅಂಗೀಕರಿಸಿದ ಹಂತದಲ್ಲಿ ವಜಾಗೊಳಿಸಬಾರದು ಎನ್ನುವ ಮಾನ್ಯ ಹಿರಿಯ ವಕೀಲರ ನಿವೇದನೆಗಳಿಂದ ನಾವು ಪ್ರಭಾವಿತರಾಗಿರುವುದಿಲ್ಲ. ಹಾಗೂ ***ಟಿ.ಎಸ್. ಚನ್ನೇಗೌಡ***ರವರ ಪ್ರಕರಣದಲ್ಲಿ (ಮೇಲಿನ) ವರದಿಯಾದ ***ಉತ್ತರ ಪ್ರದೇಶ ಅವಾಸ್ ಈವಮ್ ವಿಕಾಸ್ ಪರಿಷದ್ –ವಿರುದ್ಧ – ಶೂ ನರೈನ್ ಕುಶವ್ಹ ಮತ್ತು ಇತರರು***[7] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಪ್ರಧಾನವಾಗಿ, ಉಚ್ಚ ನ್ಯಾಯಾಲಯವು, ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳಿಲ್ಲದಿದ್ದರೆ ಸುನಾವಣೆಯ ಪ್ರಾಥಮಿಕ ಹಂತದಲ್ಲಿ ಮೊದಲ ಅಪೀಲನ್ನು ವಜಾಗೊಳಿಸಲು, ಸಶಕ್ತಗೊಳಿಸಿದೆಯೆಂದು ಅಭಿಪ್ರಾಯಪಟ್ಟಿದೆ. ಸದರಿ ವಜಾಗೊಳಿಸುವಿಕೆಯನ್ನು 11ನೇ ನಿಯಮದ 41ನೇ ಕ್ರಮಾದೇಶದ ಮೇರೆಗೆ ಅಧಿಕಾರ ಚಲಾಯಿಸುವಾಗ ಕಾರಣಗಳ ಮೂಲಕ ಸಮರ್ಥಿಸಬೇಕು.

18. ನಾವು ಅಧಿವಿಚಾರಣಾ ನ್ಯಾಯಾಲಯದ ಎಲ್ಲಾ ದಸ್ತಾವೇಜುಗಳು ಮತ್ತು ಸಾಕ್ಷಿಯ ಪ್ರತಿಯನ್ನು ಹಾಜರುಪಡಿಸಲು ಅವಕಾಶ ನೀಡಿರುತ್ತೇವೆ ಮತ್ತು ಅಪೀಲುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ವಾದವನ್ನು ಸಮರ್ಥಿಸುವುದಕ್ಕಾಗಿ ಅವುಗಳನ್ನು ಹಾಜರುಪಡಿಸಿದ್ದಾರೆ ಮತ್ತು ನಾವು ಅವುಗಳನ್ನು ಪರಿಗಣಿಸಿದ್ದೇವೆ. ತ್ಯಾಗಪತ್ರ ನಿಶಾನೆ ಡಿ.1 ವಾದಿಗಳ ಹಕ್ಕನ್ನು, ಅಧಿಕಾರ ಮತ್ತು ಹಿತಾಸಕ್ತಿಯನ್ನು ಕುಗ್ಗಿಸುವ ವ್ಯವಸ್ಥೆ ಮಾಡಲಾದ ದಸ್ತಾವೇಜು ಎಂದು ನಮಗೆ ಮನದಟ್ಟಾಗಿರುವುದಿಲ್ಲ. ವ್ಯವಹಾರದ ಬಗೆಗಿನ ಸದ್ಭಾವನೆಯನ್ನು ರುಜುವಾತುಪಡಿಸುವ

7. (2011)6 ಎಸ್‌ಸಿಸಿ 456

ಹೊಣೆಗಾರಿಕೆಯನ್ನು ಪ್ರತಿವಾದಿಗಳು ನಿರ್ವಹಿಸಿರುವರು ಹಾಗೂ ವಾದಿಗಳು ತಮ್ಮ ವಾದವನ್ನು ಸಾಬೀತುಪಡಿಸಲು ಹೀನವಾಗಿ ವಿಫಲರಾಗಿದ್ದಾರೆ. ಅಧೀನ ನ್ಯಾಯಾಲಯದ ಸಾಕ್ಷ್ಯದ ಮೌಲ್ಯಮಾಪನದಲ್ಲಿ ಯಾವುದೇ ದೋಷ ಕಂಡುಬಂದಿಲ್ಲ. ಸನ್ನಿವೇಶಗಳ ಅಡಿಯಲ್ಲಿ ***ಕೆ.ವಿ. ಲಕ್ಷ್ಮಣ್*** (ಮೇಲಿನ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಅಪೀಲುದಾರರಿಗೆ ಯಾವುದೇ ಸಹಾಯ ಮಾಡುವುದಿಲ್ಲವೆಂಬುದು ನಮಗೆ ಕಂಡು ಬಂದಿದೆ.

19. ಹಿಂದೆ ಹೇಳಲಾದ ಕಾರಣಗಳಿಗಾಗಿ, ನಾವು, ಅಪೀಲಿನಲ್ಲಿ ಯಾವುದೇ ಗುಣಾರ್ಹತೆಗಳಿಲ್ಲವೆಂದು ಅಪೀಲನ್ನು ವಜಾಗೊಳಿಸಲು ತಕ್ಕುದಾಗಿರುತ್ತದೆಯೆಂಬ ದೃಷ್ಟಿಕೋನವನ್ನು ತಳೆದಿರುತ್ತೇವೆ.

ಇದರ ಫಲಿತಾಂಶವಾಗಿ ಅಪೀಲನ್ನು ವಜಾಗೊಳಿಸಲಾಗಿದೆ.